ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಹಣದುಬ್ಬರ ಮತ್ತು ಹಣದ ಸಂಚಯನ

ಈಚನೂರು ರಾಜರತ್ನಂ

48

ಹಣದುಬ್ಬರ ಮತ್ತು ಹಣದ ಸಂಚಯನ

ಈಚನೂರು ರಾಜರತ್ನಂ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

HANADUBBARA MATTU HANADA SANCHAYANA
by Echanur Rajarathnam, Published by Prasaranga,
Bangalore University, Bangalore ; Pp. 40+viii

ಪ್ರಕಾಶಕರು :

ಹೆಚ್. ಆರ್. ದಾಸೇಗೌಡ

ನಿರ್ದೇಶಕ, ಪ್ರಸಾರಾಂಗ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಬೆಲೆ : 50 ಪೈಸೆ

ಮುದ್ರಣ :

ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ – ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ

ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಈ ಉಪಯುಕ್ತ ಕೃತಿಯನ್ನು ಹೊರತರುವಲ್ಲಿ ವಿಶ್ವ ವಿದ್ಯಾಲಯದ ಜೊತೆ ಸಹಕರಿಸಿದ ಶ್ರೀಮಾನ್ ಈಚನೂರು ರಾಜರತ್ನಂ ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ನಮ್ಮ ವಂದನೆಗಳು.

ಎಚ್. ನರಸಿಂಹಯ್ಯ
ಉಪಕುಲಪತಿ

ಅರಿಕೆ

ಇಂದು ಎಲ್ಲೆಲ್ಲೂ ವ್ಯಾಪಕ ಚರ್ಚೆಗೆ ಗುರಿಯಾಗಿರುವ ಹಣದುಬ್ಬರವನ್ನು ಕುರಿತಾದುದು ಈ ಕಿರು ಹೊತ್ತಿಗೆ. ವಿಷಯದ ಸಮರ್ಥ ಪರಿಚಯವನ್ನು ಸರಳ ಭಾಷೆಯಲ್ಲಿ ಓದುಗರಿಗೆ ಮಾಡಿಕೊಡುವ ನಮ್ರ ಪ್ರಯತ್ನ ನನ್ನದು.

ನನ್ನ ಈ ಕೃತಿ ಹೊರಬರಲು ಕಾರಣರಾದ ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿ ಡಾ॥ ಎಚ್. ನರಸಿಂಹಯ್ಯ ಹಾಗೂ ಪ್ರಸಾರಾಂಗದ ಉಪನಿರ್ದೇಶಕರು ಶ್ರೀ ಕೆ. ಸಿ. ಶಿವಪ್ಪ ಅವರಿಗೆ ನಾನು ಆಭಾರಿ. ಪ್ರಸಾರಾಂಗದ ನಿರ್ದೇಶಕರು ಶ್ರೀ ಹೆಚ್. ಆರ್. ದಾಸೇಗೌಡ ಅವರಿಗೆ ನನ್ನ ಕೃತಜ್ಞತೆಗಳು.

ಈ ಕೃತಿಯ ರಚನೆಗೆ ತಮ್ಮ ಅಮೂಲ್ಯ ಸಲಹೆಗಳನ್ನಿತ್ತ ಸೋದರ ಶ್ರೀ ಈಚನೂರು ಶ್ರೀಧರಮೂರ್ತಿ, ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು, ಹಸ್ತಪ್ರತಿಯನ್ನು ಸಿದ್ಧಪಡಿಸಿದ ನನ್ನ ವಿದ್ಯಾರ್ಥಿ ಶ್ರೀ ಜಿ. ನಿಜಗುಣ ಮೂರ್ತಿ, ಕನಕಪುರ, ಇವರಿಗೂ ನನ್ನ ವಂದನೆಗಳು.

ಜುಲೈ 1, 1977 ಈಚನೂರು ರಾಜರತ್ನಂ

ಹಣದುಬ್ಬರ
ಮತ್ತು
ಹಣದ ಸಂಚಯನ

ಹಣದುಬ್ಬರ ಮತ್ತು ಹಣದ ಸಂಚಯನ
(Inflation and Deflation)

"ಹಣದುಬ್ಬರ" ಅರ್ಥಶಾಸ್ತ್ರ ಗ್ರಂಥಗಳಲ್ಲಿ ವಿಪುಲವಾಗಿ ಚರ್ಚಿಸಲ್ಪಟ್ಟಿದೆ. ವಿಶ್ವದ ಇಂದಿನ ಆರ್ಥಿಕ ಹಾಗೂ ರಾಜಕೀಯ ಚರ್ಚೆಗಳು ಹಣದುಬ್ಬರದ ಸುತ್ತ ಹೆಣೆದು ಕೊಂಡಿವೆ. ಹಣದುಬ್ಬರ ಸಾಮಾನ್ಯವಾಗಿ ಇಂದು ಎಲ್ಲಾ ರಾಷ್ಟ್ರಗಳನ್ನೂ, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಕಾಡುತ್ತಿದೆ. ಇದನ್ನು ಹತೋಟಿಗೊಳಪಡಿಸುವುದೇ ಸರ್ಕಾರದ ನೀತಿಯ ಒಂದು ಪ್ರಮುಖ ಅಂಗವಾಗಿದೆ. ಆರ್ಥಿಕ ಬೆಳವಣಿಗೆಯನ್ನು ಸಾಧಿಸುತ್ತಿರುವ ಅರ್ಥವ್ಯವಸ್ಥೆಯಲ್ಲಿ ಅನೇಕ ಅನಿವಾರ್ಯ ಕಾರಣಗಳಿಂದಾಗಿ ಹಣದುಬ್ಬರ ಉಂಟಾಗುತ್ತದೆ. ಜನರ ಹಣ ಆದಾಯವು, ಸರಕು ಹಾಗೂ ಸೇವೆಗಳು ಹೆಚ್ಚುವ ಪ್ರಮಾಣಕ್ಕಿಂತ ವೇಗವಾಗಿ ಮೇಲೇರಿದಾಗ, ಬೇಡಿಕೆಯು ಗಣನೀಯವಾಗಿ ಹೆಚ್ಚಿ ಪೂರೈಕೆಯ ಮೇಲೆ ತೀವ್ರತರವಾದ ಒತ್ತಡವುಂಟಾಗುತ್ತದೆ. ಪರಿಣಾಮವಾಗಿ ಬೆಲೆಗಳು ಏರುತ್ತವೆ.

ಅರ್ಥ ವಿವರಣೆ

ಹಣದುಬ್ಬರ ಎಂದರೆ ಬೆಲೆಯೇರಿಕೆ. ಹಣದ ಪೂರೈಕೆಯು ಹೆಚ್ಚಿದ ಪರಿಣಾಮವಾಗಿ ಬೆಲೆಗಳು ಮೇಲೇರುವ ಸ್ಥಿತಿಯನ್ನು ಹಣದುಬ್ಬರವೆಂದು ಸಾಮಾನ್ಯವಾಗಿ ಕರೆಯು ತ್ತಾರೆ. ಹಣದುಬ್ಬರದ ಒಂದು ಗುಣ ಧಾರಣೆವಾಸಿಗಳು

ಮೇಲೇರುವುದು. ಹಣದುಬ್ಬರದ ವೈಜ್ಞಾನಿಕ ನಿರೂಪಣೆ ಸುಲಭ ಸಾಧ್ಯವಲ್ಲ. ಅರ್ಥಶಾಸ್ತ್ರಜ್ಞರು ಹಣದುಬ್ಬರವನ್ನು ಹಲವಾರು ವಿಧದಲ್ಲಿ ನಿರೂಪಿಸಿದ್ದಾರೆ. ಹಣದುಬ್ಬರ ಎಂದರೆ ಬೆಲೆಗಳು ಏರಿ ಹಣದ ಬೆಲೆಯು ಇಳಿಯುವುದು. ಬೆಲೆಯೇರಿಕೆ ಮತ್ತು ಹಣದ ಮೌಲ್ಯ (Value of Money)ದ ನಡುವಣ ಸಂಬಂಧ ವಿಪರ್ಯಾಯ (Inverse) ವಾದುದು. ಬೆಲೆಗಳು ಏರಿದರೆ ಹಣದ ಮೌಲ್ಯ ಕಡಿಮೆಯಾಗುತ್ತದೆ, ಮತ್ತು ಬೆಲೆಗಳು ಇಳಿದಾಗ ಹಣದ ಮೌಲ್ಯ ಹೆಚ್ಚಾಗುತ್ತದೆ. ಸರಕು ಸೇವೆಗಳ ಪ್ರಮಾಣ ಸ್ಥಗಿತವಾಗಿದ್ದು ಹಣದ ಚಲಾವಣೆ ಹೆಚ್ಚಿದರೆ ಬೆಲೆಗಳು ಮೇಲೇರುತ್ತವೆ ಎನ್ನುವುದು ಕೆಮ್ಮರರ್ ಎನ್ನುವ ಅರ್ಥಶಾಸ್ತ್ರಜ್ಞನ ಅಭಿಮತ. ಕೋಲ್‌ಬೋರ್ನ್ ರವರ ಪ್ರಕಾರ, "ಹೆಚ್ಚು ಹಣ ಕಡಿಮೆ ಸರಕುಗಳನ್ನು ಬೆನ್ನಟ್ಟುವುದೇ" ಹಣದುಬ್ಬರ. ಗ್ರೆಗರಿಯವರ ಪ್ರಕಾರ, "ಹಣದ ಪ್ರಮಾಣದ ಅತ್ಯಧಿಕ ಏರಿಕೆಯೇ"[1] ಹಣದುಬ್ಬರ. ಆದರೆ ಕೂಲಿದರದ ಏರಿಕೆ, ಅಧಿಕಲಾಭ ಮುಂತಾದ ಕಾರಣ ಗಳಿಂದಾಗಿಯೂ ಸಹ ಬೆಲೆಗಳು ಮೇಲೇರಬಹುದು. "ಹಣದುಬ್ಬರ ಯಾವಾಗಲೂ ಮತ್ತು ಎಲ್ಲೆಡೆಯೂ ಹಣಕ್ಕೆ ಸಂಬಂಧಪಟ್ಟ ವಿಷಯ"[2] ಎಂದು ಮಿಲ್ಟನ್ ಫ್ರೀಡ್‌ಮನ್ ಹೇಳಿದ್ದಾರೆ. ಪಾಲ್ ಎಂಜಿಗ್‌ರವರು ಹಣದುಬ್ಬರವನ್ನು "ಕೊಳ್ಳುವ ಶಕ್ತಿಯ ವಿಸ್ತರಣೆಯು ಬೆಲೆಯೇರಿಕೆಗೆ ಕಾರಣ

---

1. Gregory : "Inflation" Encyclopaedia Britannica
2. Milton Friedman : Inflation–Causes & Consequences, p. 17

ಅಥವಾ ಪರಿಣಾಮವಾಗುವ ಅಸಮತೋಲನ ಸ್ಥಿತಿ''[3] ಎಂದಿದ್ದಾರೆ.

ಆಧುನಿಕ ಅರ್ಥಶಾಸ್ತ್ರಜ್ಞರು ದೇಶದ ಸಂಪೂರ್ಣ ಆದಾಯ–ವೆಚ್ಚಕ್ಕೂ ಹಾಗೂ ಮಾರಾಟಕ್ಕಿರುವ ಪದಾರ್ಥಗಳ ಪ್ರಮಾಣಕ್ಕೂ ಸಂಬಂಧ ಕಲ್ಪಿಸಿ ಹಣದುಬ್ಬರವನ್ನು ವಿವರಿಸಿದ್ದಾರೆ. ಹಣದ ಪೂರೈಕೆ ಹೆಚ್ಚಿದಾಗ ಜನತೆಯ ವರಮಾನ ಹೆಚ್ಚುತ್ತದೆ. ಈ ಹೆಚ್ಚಿದ ವರಮಾನದಿಂದ ಪೇಟೆಯಲ್ಲಿ ಬೇಡಿಕೆ ಅಧಿಕವಾಗುತ್ತದೆ. ಉತ್ಪಾದನೆಯಲ್ಲಿ ಏರಿಕೆ ಉಂಟಾಗದೆ, ಹಣದ ಪೂರೈಕೆಯು ಹೆಚ್ಚಿ ವರಮಾನ ಹೆಚ್ಚಿದುದೇ ಆದರೆ ಸರಕುಗಳ ಬೆಲೆಗಳು ತಾನೇ ತಾನಾಗಿ ಮೇಲೇರಲು ತೊಡಗುತ್ತವೆ. ಹಣದ ಹೆಚ್ಚು ಪೂರೈಕೆಯೊಡನೆ ಉತ್ಪಾದನೆಯೂ ಅದೇ ಗತಿಯಲ್ಲಿ ಏರಿದರೆ ಬೆಲೆಗಳು ಏರುವುದಿಲ್ಲ. ಪೇಟೆಯಲ್ಲಿನ ಸರಕುಗಳ ಪ್ರಮಾಣ ಇದ್ದಷ್ಟೇ ಇದ್ದು ಹಣದ ಚಲಾವಣೆ ಹೆಚ್ಚಿದುದೇ ಆದರೆ ಬೆಲೆಗಳು ಮೇಲೇರುತ್ತವೆ ಎಂದು ಫಿಷರ್ ಅಭಿಪ್ರಾಯ ಪಟ್ಟಿದ್ದಾರೆ. ಜೆ. ಎಂ. ಕೀನ್ಸ್‌ರವರ ಪ್ರಕಾರ ಪೂರ್ಣ ಉದ್ಯೋಗ (Full Employment) ಸ್ಥಿತಿ ದೇಶದಲ್ಲಿ ಉಂಟಾದನಂತರ ಮಾತ್ರ ಹಣದುಬ್ಬರ ಉಂಟಾಗುತ್ತದೆ. ಎಲ್ಲಾ ಉತ್ಪಾದನಾಂಗಗಳೂ ಉದ್ಯೋಗ ಸ್ಥಿತಿಯಲ್ಲಿರುವುದನ್ನು ಪೂರ್ಣ ಉದ್ಯೋಗ ಸ್ಥಿತಿ ಎನ್ನಬಹುದು. ಎಲ್ಲಿಯವರೆಗೆ ದೇಶದಲ್ಲಿ ನಿರುದ್ಯೋಗ ವಿರುವುದೋ ಅಲ್ಲಿಯವರೆಗೆ ಹಣದ ಪೂರೈಕೆಯು ಹೆಚ್ಚಿದಂತೆ ಉತ್ಪಾದನೆಯೂ ಹೆಚ್ಚಿದರೆ ಧಾರಣೆವಾಸಿಗಳು ಮೇಲೇರು

---

3. Paul Einzig : Inflation, p. 22

ವುದಿಲ್ಲ. ಪೂರ್ಣ ಉದ್ಯೋಗ ಸ್ಥಿತಿಯನ್ನು ತಲುಪಿದ ನಂತರ ಹಣದ ಪೂರೈಕೆ ಹೆಚ್ಚಿದ ಪ್ರಮಾಣದಲ್ಲೇ ಬೆಲೆಗಳೂ ಏರುತ್ತವೆ. ಪೂರ್ಣ ಉದ್ಯೋಗ ಸ್ಥಿತಿಯನ್ನು ತಲುಪುವುದಕ್ಕೆ ಮುಂಚಿತವಾಗಿ ಉತ್ಪಾದನಾಂಗಗಳ ನಿರುದ್ಯೋಗ ಸ್ಥಿತಿಯಲ್ಲಿರುವುದರಿಂದ ಹಣದ ಸರಬರಾಜು ಅಥವಾ ಹಣದ ಹೂಡಿಕೆಯನ್ನು ಹೆಚ್ಚಿಸಿ ಉತ್ಪಾದನೆಯನ್ನು ಹೆಚ್ಚಿಸಬಹುದು. ಆದರೆ ಪೂರ್ಣ ಉದ್ಯೋಗ ಸ್ಥಿತಿಯನ್ನು ತಲುಪಿದ ನಂತರ ಹಣದ ಹೂಡಿಕೆಯನ್ನು ಹೆಚ್ಚಿಸಿದರೂ ಸಹ ಉತ್ಪಾದನೆ ಹೆಚ್ಚುವುದಿಲ್ಲ. ಇದಕ್ಕೆ ಎಲ್ಲಾ ಉತ್ಪಾದನಾಂಗಗಳೂ ಈಗಾಗಲೇ ಉದ್ಯೋಗದಲ್ಲಿ ತೊಡಗಿರುವುದೇ ಮುಖ್ಯ ಕಾರಣ. ಆದ್ದರಿಂದಲೇ ಪೂರ್ಣ ಉದ್ಯೋಗ ಸ್ಥಿತಿಯನ್ನು ತಲುಪಿದ ನಂತರ ಹಣದ ಪ್ರಮಾಣ ಅಥವಾ ಹೂಡಿಕೆ ಹೆಚ್ಚಿದ ಪ್ರಮಾಣದಲ್ಲೇ ಬೆಲೆಗಳು ಮೇಲೇರಿ, ಹಣದ ಮೌಲ್ಯ–ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಹಣದುಬ್ಬರವನ್ನು ಹಣದ ಬಾಹುಳ್ಯವೆಂದೂ, ಹಣದ ಸಂಚಯನವನ್ನು ಕುಗ್ಗು ಪ್ರಸರಣವೆಂದೂ ಕರೆಯಬಹುದು.

ಆದರೆ ಭಾರತದಲ್ಲಿ ನಿರುದ್ಯೋಗದೊಂದಿಗೆ ಹಣದುಬ್ಬರವೂ ಇರುವುದು ವಿಪರ್ಯಾಸವೇ ಸರಿ. ಪಂಚವಾರ್ಷಿಕ ಯೋಜನೆಗಳ ಮೂಲಕ ಭಾರತವು ಶೀಘ್ರ ಆರ್ಥಿಕಪ್ರಗತಿಯನ್ನು ಸಾಧಿಸಲು ಪ್ರಯತ್ನಿಸುತ್ತಿರುವುದು ಸರ್ವವಿದಿತ. ಆದರೆ ಆರ್ಥಿಕಾಭಿವೃದ್ಧಿಗೆ ಅಗತ್ಯವಾದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ದೇಶವು ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದು, ಖೋತಾಹಣಗಾರಿಕೆ (ಹಣಸೃಷ್ಟಿ) ಯನ್ನು ಸತತವಾಗಿ ಕೈಗೊಂಡ ಪರಿಣಾಮವಾಗಿ ಜನರ ಹಣದ ಆದಾಯ

ಮತ್ತು ಬೇಡಿಕೆಯೂ ಹೆಚ್ಚಿ, ಅದೇ ಪ್ರಮಾಣದಲ್ಲಿ ಪೂರೈಕೆಯು ಹೆಚ್ಚದೆ ಬೆಲೆಯೇರಿಕೆಯುಂಟಾಗಿದೆ. ಉತ್ಪಾದನೆ ಮತ್ತು ಹೂಡಿಕೆಯನ್ನು ಹೆಚ್ಚಿಸಲು ಇರುವ ತೊಡಕುಗಳೇ ಬೇಡಿಕೆ-ಪೂರೈಕೆಗಳ ನಡುವಣ ಅಸಮತೋಲನಕ್ಕೆ ಬಹು ಮುಖ್ಯ ಕಾರಣ.

ಭಾರತದಲ್ಲಿ ಹಣದುಬ್ಬರ ವ್ಯಾಪಕವಾಗಿ ಹರಡಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಬೆಲೆಗಳು ಶೇಕಡಾ 22 ರಷ್ಟು ಇಳಿದರೆ, ದ್ವಿತೀಯ ಯೋಜನೆಯಲ್ಲಿ ಶೇಕಡಾ 30, ತೃತೀಯ ಯೋಜನೆಯಲ್ಲಿ ಶೇಕಡಾ 32 ಹಾಗೂ ಚತುರ್ಥ ಯೋಜನೆಯಲ್ಲಿ ಶೇಕಡಾ 61 ರಷ್ಟು ಹೆಚ್ಚಿದವು. ಸ್ವಾತಂತ್ರ್ಯ ನಂತರದ 29 ವರ್ಷಗಳಲ್ಲಿ ಭಾರತದಲ್ಲಿ ಬೆಲೆಗಳು ಶೇಕಡಾ 300 ರಷ್ಟು ಹೆಚ್ಚಿವೆ. 1973-74 ರಲ್ಲಿ ಬೆಲೆಗಳು ಪ್ರತಿ ನಿತ್ಯವೂ ಮೇಲೇರಲು ಪ್ರಾರಂಭಿಸಿದವು.

ಭಾರತದಂತಹ ವಿಕಾಸಶೀಲ ಅರ್ಥವ್ಯವಸ್ಥೆಯಲ್ಲಿ ಬೆಲೆಯೇರಿಕೆ ಅನಿವಾರ್ಯ; ಹಾಗೆಯೇ ಆರ್ಥಿಕ ಅಸ್ಥಿರತೆ, ಅಸಮಾನತೆಗಳೂ ಕೂಡ ಎಂದು ಕೆಲವರ ಅಭಿಪ್ರಾಯ. ಯೋಜನಾವಧಿಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗಿದೆ. ಈ ಪೈಕಿ, ದೀರ್ಘಾವಧಿಯಲ್ಲಿ ಫಲನೀಡುವ ಕಾರ್ಯಕ್ರಮಗಳಿಗಾಗಿಯೂ ಬಂಡವಾಳವನ್ನು ತೊಡಗಿಸಲಾಗಿದೆ. ಅಲ್ಲದೆ, ಉಳಿತಾಯ ಹಾಗೂ ತೆರಿಗೆಗಳಿಂದ ಬಂದ ಹಣವು ಸಾಲದೆ ಖೋತಾ-ಆಯ ವ್ಯಯವನ್ನು ಸತತವಾಗಿ ಕೈಗೊಂಡ ಪರಿಣಾಮವಾಗಿ ಹಣದ ಪ್ರಸರಣ ಅತಿಯಾಗಿದೆ. ಈ ಮಧ್ಯೆ ಜನತೆಯ ಆದಾಯವು

ಹೆಚ್ಚಿ, ತಮ್ಮ ಜೀವನವನ್ನು ಸುಧಾರಿಸಿಕೊಳ್ಳುವ, ಬಯಕೆಗಳನ್ನು ಈಡೇರಿಸಿಕೊಳ್ಳುವ ಹವಣಿಕೆಯಲ್ಲಿ ಅವರು ಹೆಚ್ಚು ವೆಚ್ಚಮಾಡಿ, ಉತ್ಪಾದನೆಯೂ ಆ ಮಟ್ಟಕ್ಕೆ ಹೆಚ್ಚದಿರುವುದು ಗಮನಾರ್ಹವಾದ ಅಂಶ. ತಿನ್ನುವ ಬಾಯಿಗಳು ಹೆಚ್ಚಿದಂತೆ, ದುಡಿಯುವ ಕೈಗಳೂ ಹೆಚ್ಚಬೇಕು. ಆ ಕೈಗಳಿಗೆ ಕೆಲಸ ಬೇಕು. ಇಲ್ಲದೆ ಹೋದರೆ ಸಮಸ್ಯೆಗಳು ಪ್ರಾರಂಭ. ಕಡಿಮೆ ಉತ್ಪಾದನೆ ಹಾಗೂ ಹೆಚ್ಚು ಜನಸಂಖ್ಯೆ ಭಾರತದ ಹಣದುಬ್ಬರಕ್ಕೆ ಒಂದು ಪ್ರಮುಖ ಕಾರಣ. ಭಾರತದ ಬೆಲೆಯೇರಿಕೆಗೆ ಆರ್ಥಿಕ ತತ್ವಗಳ ಬೆಂಬಲವಿಲ್ಲ.

ಹಣದುಬ್ಬರದ ವಿಧಗಳು

ಹಣದುಬ್ಬರ ಹಲವಾರು ರೀತಿಯಲ್ಲಿ ಸಂಭವಿಸಬಹುದು. ಅವುಗಳಲ್ಲಿ ಮುಖ್ಯವಾದ ಎರಡು ವಿಧಗಳಿವೆ :

1) ಬೇಡಿಕೆ ಒತ್ತಡದ ಹಣದುಬ್ಬರ (Demand Pull Inflation).
2) ಅಧಿಕ ವೆಚ್ಚದ ಹಣದುಬ್ಬರ (Cost-push Inflation).

ವರಮಾನದ ಏರಿಕೆ ಮತ್ತು ಹಣದ ಚಲಾವಣೆಯಿಂದ ಮಾರುಕಟ್ಟೆಯಲ್ಲಿ ಬೇಡಿಕೆ, ಪರಿಣಾಮವಾಗಿ ಬೆಲೆಗಳು ಮೇಲೇರಬಹುದು. ಇದೇ ಬೇಡಿಕೆ ಒತ್ತಡದ ಹಣದುಬ್ಬರ. ಅಭಿವೃದ್ಧಿಶೀಲ ರಾಷ್ಟ್ರವು ತ್ವರಿತ ಆರ್ಥಿಕಾಭಿವೃದ್ಧಿಯನ್ನು ಕೈಗೊಳ್ಳಲು ತೀರ್ಮಾನಿಸಿದಾಗ ಅಪಾರವಾದ ಪ್ರಮಾಣದಲ್ಲಿ ಬಂಡವಾಳವನ್ನು ಹೂಡಬೇಕಾಗುತ್ತದೆ. ಸರ್ಕಾರಿ ವೆಚ್ಚವು

ಕೂಲಿಗಾರರಿಗೆ, ವಸ್ತುಗಳನ್ನು ಪೂರೈಕೆ ಮಾಡಿದವರಿಗೆ, ಮತ್ತು ಯೋಜನೆಯಲ್ಲಿ ನಿರತರಾದವರಿಗೆ ಆದಾಯವಾಗಿ ಪರಿಣಮಿಸು ತ್ತದೆ. ಕಡಿಮೆ ಆದಾಯದಿಂದಾಗಿ ಅನುಭೋಗದ ಸಂಯಮ ಮಾಡಿಕೊಂಡು ಬಂದಿದ್ದ ಉದ್ಯೋಗಿಗಳು ಹೆಚ್ಚಿನ ವರಮಾನ ದಿಂದಾಗಿ ವಸ್ತುಗಳನ್ನು ಕೊಳ್ಳಲು ಉಪಕ್ರಮಿಸುತ್ತಾರೆ. ಪೇಟೆ ಯಲ್ಲಿ ಬೇಡಿದ ವಸ್ತುಗಳ ಕೊರತೆಯಿದ್ದರೆ ಬೆಲೆ ಸಹಜವಾಗಿ ಏರುತ್ತದೆ. ಯೋಜನಾವಧಿಯಲ್ಲಿ ಆಹಾರ, ಬಟ್ಟೆ ಮತ್ತು ಇತರೆ ನಿತ್ಯೋಪಯೋಗಿ ವಸ್ತುಗಳ ಬೆಲೆಗಳು ಮಿತಿಮೀರಿ ಏರಲು ಇದೇ ಮುಖ್ಯ ಕಾರಣ. ಇದನ್ನು 'ಬೇಡಿಕೆ ಒತ್ತಡದ ಹಣದುಬ್ಬರ'ವೆಂದು ಕರೆಯುತ್ತಾರೆ. ಸಿದ್ಧ ವಸ್ತುಗಳ ಬೆಲೆಗಳು ತೀವ್ರವಾದಾಗ ಉತ್ಪಾದಕರು ಆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಲು ತೊಡಗುತ್ತಾರೆ. ಆಗ ಕಚ್ಚಾಸಾಮಗ್ರಿಗಳೇ ಮುಂತಾದ ಉತ್ಪಾದನಾ ಸರಕುಗಳ ಬೇಡಿಕೆಯು ಏರಿ ಅವುಗಳ ಬೆಲೆಗಳೂ ಏರುತ್ತವೆ. ಇದೂ ಬೇಡಿಯ ಪ್ರಭಾವದಿಂದಾ ದುದು. ಉತ್ಪಾದನಾಂಗಗಳ ಬೆಲೆಯು ಏರಿದರೆ, ಸಿದ್ಧ ವಸ್ತು ಗಳ ಅಥವಾ ತಯಾರಿಕಾ ವಸ್ತುಗಳ ಬೆಲೆಗಳೂ ಏರುತ್ತವೆ. ಉತ್ಪಾದನಾ ವೆಚ್ಚ ಹೆಚ್ಚಿದಾಗಲೂ ಸಹ ಬೆಲೆಗಳು ಮೇಲೇರು ತ್ತವೆ. ಸರ್ಕಾರವು ವಿಧಿಸುವ ಸುಂಕ ಹೆಚ್ಚಿದಾಗ, ಉತ್ಪಾದಕರು ಲಾಭಾಂಶವನ್ನು ಹೆಚ್ಚಿಸಿಕೊಂಡಾಗ ಮತ್ತು ಕಾರ್ಮಿಕರು ತಮ್ಮ ಸಂಘಗಳ ಮೂಲಕ ಕೂಲಿದರವನ್ನು ಹೆಚ್ಚಿಸಿಕೊಂಡಾಗ ಬೆಲೆ ಗಳು ಮೇಲೇರಬಹುದು. ಕಾರ್ಮಿಕ ಸಂಘಗಳು ಬಲವಾಗಿದ್ದರೆ ಕಾರ್ಮಿಕರ ಕೂಲಿ ಹೆಚ್ಚಿ, ಪರಿಣಾಮವಾಗಿ ಬೇಡಿಕೆ ಮತ್ತು ಬೆಲೆ ಮೇಲೇರುವುದು ನಿಸ್ಸಂಶಯ. ಈ ಎಲ್ಲಾ ಕಾರಣಗಳೂ

ಒಟ್ಟಿಗೇ ಸೇರಿ ಅಧಿಕ ವೆಚ್ಚದ ಹಣದುಬ್ಬರಕ್ಕೆ ದಾರಿಮಾಡಿ ಕೊಡುತ್ತವೆ.

ಮತ್ತೆರಡು ಮುಖ್ಯವಾದ ಹಣದುಬ್ಬರದ ರೂಪಗಳೆಂದರೆ

1) ಕೂಲಿದರ ಪ್ರೇರಿತ ಹಣದುಬ್ಬರ (wage-induced inflation).

2) ಕೊರತೆ ಹಣ ಪ್ರೇರಿತ ಹಣದುಬ್ಬರ (deficit-induced inflation).

ಬೆಲೆಗಳೂ ಮೇಲೇರಿ ವೆಚ್ಚವೂ ಮೇಲೇರಿದಾಗ, ಕಾರ್ಮಿಕರು ಹೆಚ್ಚು ಕೂಲಿಗಾಗಿ ಮಾಲೀಕರನ್ನು ಬಲವಂತಪಡಿಸುತ್ತಾರೆ. ಬೇಡಿಕೆ ನ್ಯಾಯ ಸಮ್ಮತವಾದ್ದರಿಂದ ಮಾಲೀಕರೂ ಸಹ ಕೂಲಿ ದರವನ್ನು ಹೆಚ್ಚಿಸಬೇಕಾಗುತ್ತದೆ. ಕಾರ್ಮಿಕರ ಆದಾಯ ಹೆಚ್ಚಿ, ಉತ್ಪಾದನೆ ಇದ್ದಂತೆಯೇ ಇದ್ದರೆ ಬೆಲೆಗಳು ಮೇಲೇರಿ ಹಣದುಬ್ಬರಕ್ಕೆ ದಾರಿ ಮಾಡಿಕೊಡುತ್ತದೆ. ಇದನ್ನು ಕೂಲಿದರ ಪ್ರೇರಿತ ಹಣದುಬ್ಬರವೆಂದು ಕರೆಯುತ್ತಾರೆ.

ಕೆಲವು ವೇಳೆ ಸರ್ಕಾರ ಭಾರೀ ಮೊತ್ತದ ಹಣವನ್ನು ಯುದ್ಧ ಅಥವಾ ಯೋಜನಾ ವೆಚ್ಚಕ್ಕೆ ವಿನಿಯೋಗಿಸಬೇಕಾದಾಗ ಖೋತಾ ಹಣಗಾರಿಕೆಗೆ ಮೊರೆ ಹೋಗಬೇಕಾಗುತ್ತದೆ. ಅಭಿವೃದ್ಧಿಯ ವೇಗವನ್ನು ಚುರುಕುಗೊಳಿಸುವ ಗುರಿಯನ್ನು ಹೊಂದಿರುವ ದೇಶಗಳು ಬಂಡವಾಳ ಹೂಡಿಕೆಯನ್ನು ಗಣನೀಯವಾಗಿ ಹೆಚ್ಚಿಸಬೇಕಾಗುತ್ತದೆ. ಇದಕ್ಕೆ ಅಗತ್ಯವಾದ ಸಂಪನ್ಮೂಲಗಳ ಕ್ರೋಢೀಕರಣ ಮಾಡಿಕೊಳ್ಳಬೇಕು. ಭಾರತದಂತಹ ವಿಕಾಸಶೀಲ ದೇಶದಲ್ಲಿ ತಲಾ ಆದಾಯ ಮತ್ತು ಉಳಿತಾಯ ತುಂಬಾ ಕಡಿಮೆ; ಅಲ್ಲದೆ ಬಡತನದ ವಿಷಚಕ್ರದಿಂದಾಗಿ

ಬಹುತೇಕ ಜನರು ಉಳಿತಾಯ ಮಾಡುವ ಸಾಮರ್ಥ್ಯವನ್ನು ಹೊಂದಿಲ್ಲ. ತೆರಿಗೆಗಳ ಮೂಲಕ ಸಂಪನ್ಮೂಲಗಳನ್ನು ಶೇಖರಿಸಿ, ಜನತೆಯ ಅನುಭೋಗಕ್ಕೆ ಕಡಿವಾಣವನ್ನು ಹಾಕಬಹುದಾದರೂ ಇದಕ್ಕೆ ಒಂದು ಮಿತಿ ಇದೆ; ಜನತೆ ಒಂದು ಮಿತಿಗೆ ಒಳಪಟ್ಟು ತಮ್ಮ ಅನುಭೋಗಕ್ಕೆ ಸಂಯಮವನ್ನು ಹಾಕಿಕೊಂಡು ಸೊಂಟ ಪಟ್ಟಿಯನ್ನು ಬಿಗಿ ಮಾಡಿಕೊಳ್ಳಬಹುದು. ಈ ಮೂಲದಿಂದ ಒದಗುವ ಸಂಪನ್ಮೂಲ ಸಾಲದೇ ಹೋದಾಗ ಹಣ ಸೃಷ್ಟಿಯ ಮೊರೆ ಹೋಗಬೇಕಾಗುತ್ತದೆ. ಕೇಂದ್ರ ಬ್ಯಾಂಕಿನಿಂದ ಹೆಚ್ಚು ಹಣ ಪಡೆಯುವುದು, ಅಥವಾ ಹೊಸದಾಗಿ ನೋಟುಗಳನ್ನು ಮುದ್ರಿಸುವುದನ್ನು ಖೋತಾ ಹಣಗಾರಿಕೆ ಅಥವಾ 'ಹಣಸೃಷ್ಟಿ' ಎನ್ನಬಹುದು. ಸಾಮಾನ್ಯವಾಗಿ ಇದನ್ನು ಯುದ್ಧ ವೆಚ್ಚವನ್ನು ಭರಿಸಲು ಕೈಗೊಳ್ಳಲಾಗುತ್ತದೆ. ಆದರೆ ಆರ್ಥಿಕಾಭಿವೃದ್ಧಿಯನ್ನು ಚುರುಕುಗೊಳಿಸುವ ದೃಷ್ಟಿಯಿಂದ ಹಣ ಸೃಷ್ಟಿಯನ್ನು ಸಮರ್ಥಿಸಬಹುದು. ಖೋತಾ ಹಣಗಾರಿಕೆಯು 1930 ರ ವಿಶ್ವವ್ಯಾಪೀ ಆರ್ಥಿಕ ಮುಗ್ಗಟ್ಟಿನ ನಂತರ ಹೆಚ್ಚು ಜನಪ್ರಿಯವಾಯಿತು. ಮುಗ್ಗಟ್ಟಿನಿಂದ ಅರ್ಥವ್ಯವಸ್ಥೆಯನ್ನು ಮೇಲೆತ್ತಿ ನಿರುದ್ಯೋಗವನ್ನು ನಿವಾರಿಸಲು ಹಣಸೃಷ್ಟಿ ಅತ್ಯಗತ್ಯ. ಸೃಷ್ಟಿಸಿದ ಹಣವನ್ನು ಉತ್ಪಾದಕ ಉದ್ದೇಶ್ಯಗಳಿಗೆ ಬಳಸಿದ್ದೇ ಆದರೆ ಯಾವ ಸಮಸ್ಯೆಯೂ ಇರುವುದಿಲ್ಲ. ಆದರೆ, ಯುದ್ಧ ಮತ್ತು ದುಂದು ಆಡಳಿತ ವೆಚ್ಚಕ್ಕಾಗಿ ಬಳಸಿದರೆ ಹಣದುಬ್ಬರ ಉಂಟಾಗುತ್ತದೆ. ಅಲ್ಪಾವಧಿಯಲ್ಲಿ ಉತ್ಪಾದನೆ ಖೋತಾ ಹಣಗಾರಿಕೆಯ ವೆಚ್ಚಕ್ಕೆ ಸಮನಾಗಿ ಮೇಲೇರಲು ಸಾಧ್ಯವಾಗುವುದಿಲ್ಲ. ಪರಿಣಾಮ–ಬೆಲೆ ಏರಿಕೆ. ಇದನ್ನು ಕೊರತೆ ಹಣ ಪ್ರೇರಿತ ಹಣದುಬ್ಬರವೆಂದು ಕರೆಯುತ್ತಾರೆ.

ಹಣದುಬ್ಬರಕ್ಕೆ ಸರ್ಕಾರದ ಪ್ರತಿಕ್ರಿಯೆ ಏನು ಎಂಬುದರ ಆಧಾರದ ಮೇಲೆ ಹಣದುಬ್ಬರವನ್ನು

1) ತೆರೆದ ಹಣದುಬ್ಬರ (open inflation)

ಮತ್ತು

2) ದಮನ ಮಾಡಿದ ಹಣದುಬ್ಬರ (suppressed inflation) ಎಂದು ವಿಂಗಡಿಸಲಾಗಿದೆ. ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಹೋದಾಗ ಅಂತಹ ಹಣದುಬ್ಬರವನ್ನು ತೆರೆದ ಹಣದುಬ್ಬರ ವೆಂದು ಕರೆಯಲಾಗಿದೆ. ಇಂತಹ ತೆರೆದ ಹಣದುಬ್ಬರವು ಅತ್ಯಧಿಕ ಹಣದುಬ್ಬರ (hyper inflation) ವಾಗಿ ಪರ್ಯವ ಸಾನ ಗೊಳ್ಳಬಹುದು. ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಬೆಲೆ ನಿಯಂತ್ರಣವೇ ಮುಂತಾದ ಹಣದುಬ್ಬರ ವಿರೋಧೀ ಕ್ರಮಗಳನ್ನು ಕೈಗೊಂಡರೆ ಅದನ್ನು ದಮನ ಮಾಡಿದ ಹಣದುಬ್ಬರವೆಂದು ಕರೆಯಬಹುದು.

ಬೆಲೆ ಏರಿಕೆಯ ತೀವ್ರತೆ ಮತ್ತು ಹಂತಗಳ ಆಧಾರದ ಮೇಲೆ ಹಣದುಬ್ಬರವನ್ನು

1) ತೆವಳುವ (creeping)

2) ಓಡುವ (running)

3) ನಾಗಾಲೋಟದ (galloping)

ಮತ್ತು

4) ಅತ್ಯಧಿಕ (hyper) ಹಣದುಬ್ಬರವೆಂದು ವಿಂಗಡಿಸ ಬಹುದು.

ಅಭಿವೃದ್ಧಿಯ ಪ್ರಥಮ ಹಂತದಲ್ಲಿ ಬೆಲೆಯೇರಿಕೆ ನಿಧಾನವಾಗಿರುತ್ತದೆ. ಇದನ್ನು ತೆವಳುವ ಹಣದುಬ್ಬರವೆಂದು ಪಂಡಿತರು ಕರೆದಿದ್ದಾರೆ. ಕೀನ್ಸರೇ ಮೊದಲಾದ ಅರ್ಥಶಾಸ್ತ್ರ ಪಂಡಿತರು ಉತ್ಪಾದನೆಯು ಜಡವಾಗಿದ್ದಾಗ, ಅದನ್ನು ಚಕಿತಗೊಳಿಸಲು ತೆವಳುವ ಹಣದುಬ್ಬರ ಪ್ರೇರಕ ಎಂದಿದ್ದಾರೆ. ತೆವಳುವ ಹಣದುಬ್ಬರ ಎಂದರೆ ಬೆಲೆಗಳು ನಿಧಾನವಾಗಿ ಹಾಗೂ ಮಂದಗತಿಯಲ್ಲಿ ಮೇಲೇರುವುದು. ಇದು ಹಿತಕಾರಿಯೆಂದು ಕೆಲವರ ಅಭಿಪ್ರಾಯ. ಆದರೆ ಭಾರತೀಯ ಅರ್ಥಶಾಸ್ತ್ರಜ್ಞ ಡಾ॥ ಗಾಡ್ಗೀಳರು ತೆವಳುವ ಹಣದುಬ್ಬರ ಕಾಲಾನುಕ್ರಮದಲ್ಲಿ ಅತ್ಯಧಿಕ ಹಣದುಬ್ಬರಕ್ಕೆ ಕಾರಣವಾಗುತ್ತದೆ. ಆದ್ದರಿಂದ ಅದನ್ನು ಮೂಲದಲ್ಲಿಯೇ ಕಿತ್ತುಹಾಕಬೇಕೆಂದು ಹೇಳುತ್ತಾರೆ. ಈ ಬೆಲೆ ಏರಿಕೆಯನ್ನು ತಡೆಯಲು ಪ್ರಯತ್ನಿಸದಿದ್ದರೆ ಅಥವಾ ಇಂತಹ ಪ್ರಯತ್ನ ದುರ್ಬಲವಾಗಿದ್ದರೆ ಕಾಲಕ್ರಮೇಣ ಬೆಲೆಗಳು ವೇಗವಾಗಿ ಮೇಲೇರಲು ಪ್ರಾರಂಭಿಸುತ್ತವೆ. ಇದನ್ನು ಓಡುವ ಹಣದುಬ್ಬರವೆಂದು ಕರೆಯಲಾಗಿದೆ. ಬೆಲೆಗಳು ಹೆಚ್ಚು ತೀವ್ರಗತಿಯಿಂದ ಭಯಂಕರವಾಗಿ ಮೇಲೇರಲು ತೊಡಗಿದರೆ ಅಂತಹ ಸನ್ನಿವೇಶವನ್ನು ನಾಗಾಲೋಟದ ಹಣದುಬ್ಬರವೆಂದು ಕರೆಯುತ್ತಾರೆ. ಈ ಪ್ರವೃತ್ತಿ ಮುಂದುವರೆದು ಅತ್ಯಧಿಕ ಹಣದುಬ್ಬರದಲ್ಲಿ ಕೊನೆಗೊಳ್ಳಬಹುದು. ಪ್ರಥಮ ಮಹಾಯುದ್ಧದ ತರುವಾಯ ಜರ್ಮನಿಯಲ್ಲಿ ಸಂಭವಿಸಿದ ಅತ್ಯಧಿಕ ಹಣದುಬ್ಬರವನ್ನು ಇಲ್ಲಿ ನೆನೆಸಿಕೊಳ್ಳಬಹುದು. ಜರ್ಮನಿಯಲ್ಲಿ ಒಂದು ದಶಲಕ್ಷ ಮಾರ್ಕ್ ತೆತ್ತರೂ ಒಂದು ಬಟ್ಟಲು ಕಾಫಿ ಸಿಗದೆ, ಜನರು ಗಾಡಿಗಳಲ್ಲಿ ಹಣವನ್ನು ತೆಗೆದುಕೊಂಡು ಹೋಗಿ ಜೇಬಿನಲ್ಲಿ ಸರಕುಗಳನ್ನು ತರುವಂತಾಯಿತು.

ಹಣದುಬ್ಬರ ಯಾವಾಗ ಸಂಭವಿಸಿತು ಎಂಬ ಅಂಶದ ಆಧಾರದ ಮೇಲೆ ಹಣದುಬ್ಬರವನ್ನು

1) ಯುದ್ಧ ಸಮಯದ ಹಣದುಬ್ಬರ (war-time inflation)
2) ಯುದ್ಧ ನಂತರದ ಹಣದುಬ್ಬರ (post-war inflation)
3) ಶಾಂತಿಕಾಲದ ಹಣದುಬ್ಬರ (peace time inflation) ಎಂದು ವಿಂಗಡಿಸಬಹುದು.

ಯುದ್ಧ ಕಾಲದಲ್ಲಿ ಸರ್ಕಾರವು ಬೇಕೆಂದೇ ಬೆಲೆಗಳನ್ನು ಹೆಚ್ಚಿಸಬಹುದು. ಏಕೆಂದರೆ ಯುದ್ಧ ಸಮಯದಲ್ಲಿ ಸಾರ್ವಜನಿಕರ ಅನುಭೋಗವನ್ನು ಬಲವಂತವಾಗಿಯಾದರೂ ಕಡಿಮೆಗೊಳಿಸಬೇಕಾಗುತ್ತದೆ. ಅಲ್ಲದೆ ಯುದ್ಧ ವೆಚ್ಚಕ್ಕಾಗಿ ಸರ್ಕಾರವು ಹೆಚ್ಚು ನೋಟುಗಳನ್ನು ಮುದ್ರಿಸಬಹುದು. ಯುದ್ಧಾನಂತರವೂ ದೇಶದ ಪುನರ್‌ನಿರ್ಮಾಣಕಾರ್ಯಕ್ಕಾಗಿ ಹೆಚ್ಚಿನ ಹಣವನ್ನು ವೆಚ್ಚಮಾಡಬೇಕಾಗುವುದರಿಂದ ಬೆಲೆಗಳು ಸಹಜವಾಗಿಯೇ ಏರುತ್ತದೆ. ಈ ಎರಡು ಸಂದರ್ಭಗಳಲ್ಲಿ ಹಣದುಬ್ಬರ ಸಂಭವಿಸುವುದನ್ನು ನಿರೀಕ್ಷಿಸಬಹುದು. ಆದರೆ ಶಾಂತಿ ಕಾಲದಲ್ಲಿ ಹಣದುಬ್ಬರ ಅಸಮರ್ಥನೀಯ. ಹೆಚ್ಚು ಹಣದ ಪೂರೈಕೆ, ಬೇಡಿಕೆಯ ಹೆಚ್ಚಳ, ಅಸಮರ್ಥ ಹಾಗೂ ಅದಕ್ಷ ಆಡಳಿತ, ಉತ್ಪಾದನೆಯ ಸಂಕೋಚನಗಳು ಮುಂತಾದವು ಶಾಂತಿಕಾಲದ ಹಣದುಬ್ಬರಕ್ಕೆ ಕಾರಣಗಳಾಗಬಹುದು.

ಹಣದುಬ್ಬರವು ದೇಶವ್ಯಾಪಿಯಾಗಿರಬಹುದು. ಎಲ್ಲ ವಸ್ತುಗಳ ಬೆಲೆಗಳೂ ಹೆಚ್ಚಿರಬಹುದು. ಇಂತಹ ಹಣದುಬ್ಬರ

ವನ್ನು ವ್ಯಾಪಕ (Comprehensive) ವಾದ ಹಣದುಬ್ಬರ ಎನ್ನಬಹುದು. ಅರ್ಥವ್ಯವಸ್ಥೆಯ ಯಾವುದೇ ಒಂದು ಭಾಗ ದಲ್ಲಿ ಯಾವುದೋ ಕೆಲವೇ ವಸ್ತುಗಳ ಬೆಲೆಗಳು ಏರಿದರೆ ಆದನ್ನು ವಿರಳ (Sporadic) ವಾದ ಹಣದುಬ್ಬರವೆಂದು ಕರೆಯಲಾಗಿದೆ.

ಜನಸಂಖ್ಯೆಯ ಬೆಳವಣಿಗೆ ಹಾಗೂ ಉತ್ಪಾದನೆಯ ಹಿಂಜರಿತ ಕೂಡ ಹಣದುಬ್ಬರಕ್ಕೆ ಕಾರಣಗಳಾಗಿ ಪರಿಣಮಿ ಸುತ್ತವೆ. ಜನಸಂಖ್ಯೆ ಹೆಚ್ಚಿದಂತೆ ಪದಾರ್ಥಗಳಿಗೆ ಬೇಡಿಕೆಯೂ ಹೆಚ್ಚುತ್ತದೆ. ಉತ್ಪಾದನೆ (ಪೂರೈಕೆ) ಬೇಡಿಕೆಯ ಮಟ ಕ್ಕೆ ಸಮನಾಗದಿದ್ದರೆ ಬೆಲೆಗಳು ಮೇಲೇರುತ್ತವೆ. ಜನಗಳ ನಿರೀಕ್ಷೆ (Expectations) ಯನ್ನೂ ಸಹ ಕಡೆಗಣಿಸುವಂತಿಲ್ಲ. ಅನು ಭೋಗಿಗಳು, ವರ್ತಕರು, ಉತ್ಪಾದಕರು, ವಿತರಣದಾರರು ಮುಂತಾದವರ ನಿರೀಕ್ಷೆಗಳೂ ಸಹ ಬೆಲೆಗಳು ಏರುತ್ತಿದ್ದಾಗ ಮತ್ತಷ್ಟು ಏರಲು ಪುಷ್ಟಿ ಕೊಡುತ್ತವೆ.

ಸಂಕ್ಷಿಪ್ತವಾಗಿ ಹಣದುಬ್ಬರಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು :

1) ಬೇಡಿಕೆ ಸಂಬಂಧೀ
2) ಪೂರೈಕೆ ಸಂಬಂಧೀ

1. ಬೇಡಿಕೆ ಸಂಬಂಧೀ ಕಾರಣಗಳು

ಅ) ಸರ್ಕಾರಿ ವೆಚ್ಚದ ಹೆಚ್ಚಳ
ಆ) ಖಾಸಗೀ ವೆಚ್ಚದ ಹೆಚ್ಚಳ
ಇ) ತೆರಿಗೆಗಳ ಕಡಿತ

ಈ) ಆದಾಯದ ಹೆಚ್ಚಳ

ಉ) ಸಾರ್ವಜನಿಕ ಸಾಲವನ್ನು ಹಿಂದಿರುಗಿಸುವುದು ಸಾಲ ಪಡೆಯುವುದನ್ನು ಕಡಿಮೆ ಮಾಡುವುದು ಸಾಲ ಪಡೆಯುವುದನ್ನು ನಿಲ್ಲಿಸುವುದು.

ಊ) ಜನಸಂಖ್ಯಾ ಹೆಚ್ಚಳ.

2. **ಪೂರೈಕೆ ಸಂಬಂಧೀ ಕಾರಣಗಳು**

ಅ) ಉತ್ಪಾದನಾಂಗಗಳ ಕೊರತೆ

ಆ) ರಫ್ತು ಹೆಚ್ಚಳ

ಇ) ಇಳಿಮುಖ ಪ್ರತಿಫಲ ಅಥವಾ ಅಧಿಕ ವೆಚ್ಚ

ಈ) ಅಲ್ಪ ಉತ್ಪಾದನೆ

ಉ) ಸರಕುಗಳನ್ನು ಹುದುಗಿಸಿಡುವುದು ಮತ್ತು ಲಾಭ ಬಡುಕತನ.

ಹಣದುಬ್ಬರದ ಲಕ್ಷಣಗಳು

ಹಣದುಬ್ಬರದ ಲಕ್ಷಣಗಳನ್ನು ಅರ್ಥಶಾಸ್ತ್ರ ಪಂಡಿತರು ಈ ರೀತಿ ವಿವರಿಸಿದ್ದಾರೆ :

1) ಹಣದುಬ್ಬರ ಎಂದರೆ ಬೆಲೆಯೇರಿಕೆ ; ಅದೊಂದು ಬೆಲೆಯೇರಿಕೆಯ ಪ್ರವೃತ್ತಿ.

2) ಹಣದುಬ್ಬರವು ಆರ್ಥಿಕ ಸಂಬಂಧೀ ವಿಷಯ ; ಅದು ಅರ್ಥವ್ಯವಸ್ಥೆಯಲ್ಲೇ ಹುಟ್ಟಿ, ಆರ್ಥಿಕ ಅಂಶಗಳ ಕ್ರಿಯೆ ಪ್ರತಿಕ್ರಿಯೆಗಳ ನೆರವಿನಿಂದ ಬೆಳೆಯುತ್ತದೆ.

3) ಹಣದುಬ್ಬರವು ಹಣಕಾಸು ಸಂಬಂಧೀ ವಿಷಯ ; ಹಣದ ಪೂರೈಕೆಯ ಹೆಚ್ಚಳ ಹಣದುಬ್ಬರಕ್ಕೆ ಮುಖ್ಯ ಕಾರಣ. ಬ್ಯಾಂಕು ಸಾಲದ ವಿಸ್ತರಣೆಯೂ ಕೂಡ ಹಣದುಬ್ಬರಕ್ಕೆ ಪ್ರೇರಕ.

4) ಚಕ್ರೀಯ ಏರಿಳಿತ ಹಣದುಬ್ಬರವಲ್ಲ.

5) ಪೂರ್ಣವಾದ ಹಣದುಬ್ಬರ (Pure Inflation) ವು ಪೂರ್ಣ ಉದ್ಯೋಗ ಸ್ಥಿತಿಯ ನಂತರವೇ ಸಂಭವಿಸುತ್ತದೆ.

6) ಬೇಡಿಕೆ–ಪೂರೈಕೆಗಳ ನಡುವಣ ಅಸಮತೋಲನ ಹಣದುಬ್ಬರದ ಹೆಗ್ಗುರುತು.

7) ಹಣದುಬ್ಬರವು ಒಂದು ಸಾರಿ ಪ್ರಾಪ್ತವಾದಮೇಲೆ ಪಟ್ಟು ಹಿಡಿಯುತ್ತದೆ ಮತ್ತು ಅದನ್ನು ಸುಲಭವಾಗಿ ಹಿಮ್ಮೆಟ್ಟಿಸಲು ಸಾಧ್ಯವಾಗುವುದಿಲ್ಲ.

ಹಣದುಬ್ಬರದ ಪರಿಣಾಮಗಳು

ಹಣದುಬ್ಬರವು ಆರ್ಥಿಕವಾಗಿ ದೋಷಪೂರ್ಣ, ರಾಜಕೀಯವಾಗಿ ಅಪಾಯಕಾರಿ, ಸಾಮಾಜಿಕವಾಗಿ ಅನರ್ಥಕಾರಿ ಮತ್ತು ನೈತಿಕವಾಗಿ ಸಮರ್ಥಿಸಲಾಗದ್ದು. ಅದು ತೆರೆಮರೆಯ ಬಲವಂತ ತೆರಿಗೆ ಮತ್ತು ತೆರೆದ ದರೋಡೆ (open robbery). ಪ್ರೊಫೆಸರ್ ಸಿ. ಎನ್. ವಕೀಲ್ ಅವರು ಹಣದುಬ್ಬರವನ್ನು "ಅದೃಶ್ಯ ದರೋಡೆ" (Invisible Robbery) ಎಂದಿದ್ದಾರೆ. "ಹಣದುಬ್ಬರವನ್ನು ದರೋಡೆಕೋರನಿಗೆ ಹೋಲಿಸಬಹುದು ; ಈ ಎರಡೂ ಸಿಕ್ಕಿದವರನ್ನು ದೋಚುತ್ತವೆ; ಒಂದು ವ್ಯತ್ಯಾಸ– ದರೋಡೆ ದೃಶ್ಯ, ಹಣದುಬ್ಬರ ಅದೃಶ್ಯ, ದರೋಡೆಕೋರ

ಒಬ್ಬಿಬ್ಬರನ್ನು ದರೋಡೆ ಮಾಡಬಹುದು, ಆದರೆ ಹಣದುಬ್ಬರ ಇಡೀ ದೇಶವನ್ನು ದರೋಡೆ ಮಾಡುತ್ತದೆ; ದರೋಡೆಕೋರ ನನ್ನು ನ್ಯಾಯಾಲಯಕ್ಕೆ ಎಳೆದೊಯ್ಯಬಹುದು; ಆದರೆ ಹಣದುಬ್ಬರ ನ್ಯಾಯವಾದುದು."[4]

ಹಣದುಬ್ಬರವು ಅನಿಷ್ಟಕಾರಿ. ಏಕೆಂದರೆ

1) ಆರ್ಥಿಕ ವ್ಯವಸ್ಥೆಯ ಸರಳಕಾರ್ಯ ಹದಗೆಟ್ಟು ಏರು ಪೇರುಗಳಾಗುತ್ತವೆ.

2) ಬಂಡವಾಳ ಶೇಖರಣೆ ಕ್ಷೀಣಿಸುತ್ತದೆ

3) ಜನರ ದುಡಿಯುವ ಮತ್ತು ಉಳಿಸುವ ಮನೋಭಾವ ಮತ್ತು ನೈತಿಕ ಸ್ಥೈರ್ಯ ಕುಸಿಯುತ್ತದೆ.

4) ಅನಿಶ್ಚಿಯತೆ ತಲೆದೋರಿ ಸಟ್ಟಾ ವ್ಯಾಪಾರ ಪ್ರಬಲ ವಾಗುತ್ತದೆ.

5) ಉದ್ದಿಮೆದಾರರು ನಿರುತ್ಸಾಹಗೊಳ್ಳುತ್ತಾರೆ.

6) ಬೆಲೆಗಳು ಒಂದೇ ಸಮನೆ ಏರುತ್ತಿದ್ದರೆ ಎಲ್ಲರೂ ಹಣ ವನ್ನು ಚಿನ್ನ, ಕಟ್ಟಡ ಭೂಮಿ ಮುಂತಾದ ಆಸ್ತಿಗಳಿಗೆ ಪರಿವರ್ತಿಸಲು ಪ್ರಯತ್ನಿಸುತ್ತಾರೆ.

ಬೆಲೆಗಳು ಏರುಪೇರಾಗಿ ಅದು ಸಮಾಜದ ವಿವಿಧ ವರ್ಗಗಳ ಮೇಲೆ ವಿವಿಧ ರೀತಿಯ ಪರಿಣಾಮ ಬೀರುತ್ತದೆ. ಬೆಲೆಯೇರಿಕೆ ಕೆಲವರಿಗೆ ವರ, ಕೆಲವರೆಗೆ ಶಾಪ. ಬಂಡವಾಳ

---

4. C. N. Vakil : Financial Burden of War on India.

ಗಾರರಿಂದ ಕೂಲಿಕಾರರ ತನಕ, ಶ್ರೀಮಂತರಿಂದ ಬಡವರತನಕ ವಿವಿಧ ವರ್ಗಗಳ ಜನರನ್ನು ಹಣದುಬ್ಬರವು ವಿಧವಿಧವಾಗಿ ಪೋಷಿಸುತ್ತದೆ ಮತ್ತು ಶೋಷಿಸುತ್ತದೆ.

ಉತ್ಪಾದಕರು ಮತ್ತು ಸಟ್ಟಾವ್ಯಾಪಾರಿಗಳು

ಬೆಲೆಗಳು ಏರಿದಾಗ ಉತ್ಪಾದನೆಯ ಚಕ್ರ ವೇಗವಾಗಿ ತಿರುಗಲು ಮೊದಲಾಗುತ್ತದೆ. ಸರಕುಗಳ ಬೆಲೆಗಳು ಉತ್ಪಾದನಾ ವೆಚ್ಚಕ್ಕಿಂತಲೂ ಶೀಘ್ರವಾಗಿ ಮೇಲೇರುವುದರಿಂದ ಉತ್ಪಾದ ಕರು ಹೆಚ್ಚು ಲಾಭಗಳಿಸುತ್ತಾರೆ. ಬಂಡವಾಳ ಹೂಡಿಕೆ ಹೆಚ್ಚಿ, ಎಲ್ಲಾ ಉತ್ಪಾದನಾಂಗಗಳಿಗೂ ಪೂರ್ಣ ಉದ್ಯೋಗ ಮತ್ತು ಉತ್ತಮ ಪ್ರತಿಫಲ ದೊರೆಯುವ ಸಂಭವ ಹೆಚ್ಚಾಗುತ್ತದೆ. ಬೆಲೆಯೇರಿಕೆ ವರ್ತಕರಿಗೆ ಮತ್ತು ಸಟ್ಟಾ ವ್ಯಾಪಾರಿಗಳಿಗೆ ವರವಾಗಿ ಪರಿಣಮಿಸುತ್ತದೆ. ವರ್ತಕರು ಸರಕುಗಳನ್ನು ಬೆಲೆ ಕಡಿಮೆ ಇದ್ದಾಗ ಕೊಂಡು ಬೆಲೆ ಏರಿದಾಗ ಮಾರುವುದರಿಂದ ಹೆಚ್ಚು ಲಾಭ ಗಳಿಸುತ್ತಾರೆ. ಸಟ್ಟಾ ವ್ಯಾಪಾರಿಗಳೂ ಸಹ ಬೆಲೆ ಏರಿದಾಗ ಇದೇ ರೀತಿ ಆಸ್ತಿಗಳ ಮಾರಾಟದಿಂದ ಲಾಭ ಗಳಿಸುತ್ತಾರೆ.

ಮಧ್ಯಮ ವರ್ಗ

ಮಧ್ಯಮ ವರ್ಗಕ್ಕೆ ಸೇರಿದ ಜನರಿಗೆ ಬೆಲೆಯೇರಿಕೆಯಿಂದ ಅತೀವ ತೊಂದರೆಯಾಗುತ್ತದೆ. ಬಾಡಿಗೆದಾರರು, ನಿವೃತ್ತಿ ವೇತನ ಪಡೆಯುವವರು, ಹಿಂದಿನ ಉಳಿತಾಯವನ್ನು ಅವಲಂಬಿಸಿರುವವರು, ಸರ್ಕಾರಿ ಸಾಲಪತ್ರಗಳನ್ನು ಹೊಂದಿರು ವವರು, ಸಂಬಳದಾರರು ಮತ್ತು ಇತರೆ ನಿರ್ದಿಷ್ಟ ವರಮಾನ

ವನ್ನು ಪಡೆಯುವವರಿಗೆ ಬೆಲೆಯೇರಿಕೆಯಿಂದ ಕಷ್ಟಕಾಲ ಪ್ರಾರಂಭವಾಗುತ್ತದೆ. ನಿಶ್ಚಿತ ಆದಾಯವಿದ್ದಾಗ ಬೆಲೆಗಳು ಏರಿದರೆ, ಜನರಿಗೆ ಮೊದಲು ಕೊಳ್ಳುತ್ತಿದ್ದಷ್ಟು ಪದಾರ್ಥಗಳನ್ನು ಕೊಳ್ಳಲಾಗದೆ ವ್ಯಥೆಪಡಬೇಕಾಗುತ್ತದೆ. ಬೆಲೆಯೇರಿಕೆಯ ದುಷ್ಪರಿಣಾಮಗಳು ಸಮಾಜದ ಬೆನ್ನುಮೂಳೆಯೆಂದು ಕರೆಯಲ್ಪಡುವ ಮಧ್ಯಮವರ್ಗದ ಜನರನ್ನೇ ಮೊದಲು ಕಾಡಿ ತಿನ್ನುತ್ತದೆ.

ಕಾರ್ಮಿಕರು ಬೆಲೆ ಏರಿಕೆಯಿಂದ ತೊಂದರೆಗೊಳಗಾಗುತ್ತಾರೆ. ಒಪ್ಪಂದದ ಪ್ರಕಾರ ನಿಗದಿಗೊಳಿಸಿದ ಕೂಲಿದರವು ಬೆಲೆಯೇರಿಕೆಯೊಡನೆ ಮೇಲೇರುವುದಿಲ್ಲ. ಬೆಲೆಯೇರಿಕೆ ಹಾಗೂ ಕೂಲಿದರದ ಕುದುರೆಗಳ ನಡುವೆ ಪಂದ್ಯವೇನಾದರೂ ನಡೆದರೆ ನಿಶ್ಚಿತವಾಗಿ ಗೆಲ್ಲುವುದು ಬೆಲೆಯೇರಿಕೆಯ ಕುದುರೆಯೇ ; ಕಾರಣ ಸ್ಪಷ್ಟ. ಬೆಲೆಯೇರಿಕೆಯ ಕುದುರೆ ರೇಸು ಕುದುರೆ ; ಸವಾರ ತರಬೇತಿ ಪಡೆದ ಪರಿಣತ. ಕೂಲಿದರದ ಕುದುರೆ ಟಾಂಗಾ ಕುದುರೆ ; ಸವಾರ ಅನನುಭವಿ. ಒಂದು ರಾಕೆಟ್ ಎಲ್ಲ ಕ್ಷಿಪಣಿಗಳಿಗಿಂತಲೂ ಹೆಚ್ಚು ವೇಗದಲ್ಲಿ ಹಾರುತ್ತದೆ. ಇದಕ್ಕೆ ಹಣದುಬ್ಬರ ಎನ್ನುವುದು ಸತ್ಯಕ್ಕೆ ಸಮೀಪವಾದುದು.

ಸಾಹುಕಾರರು ಮತ್ತು ಸಾಲಗಾರರು

ಸಾಹುಕಾರರು ಮತ್ತು ಸಾಲಗಾರರ ಮೇಲೂ ಬೆಲೆಯೇರಿಕೆ ತನ್ನ ಪರಿಣಾಮ ಬೀರುತ್ತದೆ. ಬೆಲೆ ಕಡಿಮೆ ಇದ್ದಾಗ ಸಾಲ ತೆಗೆದುಕೊಂಡ ಸಾಲಗಾರನೊಬ್ಬ ಬೆಲೆ ಏರಿದಾಗ ಅದನ್ನು ಸಾಹುಕಾರನಿಗೆ ವಾಪಸ್ಸು ಕೊಡುತ್ತಾನೆ ಎಂದುಕೊಳ್ಳೋಣ. ಆತ ತೆಗೆದುಕೊಂಡಿದ್ದಷ್ಟೇ ಹಣವನ್ನು ವಾಪಸ್ಸು ಮಾಡಿದರೂ

ಸಹ, ಹಣದ ಕೊಳ್ಳುವ ಶಕ್ತಿಯು ಬೆಲೆಯೇರಿಕೆಯಿಂದಾಗಿ ಕಡಿಮೆಯಾಗುವುದರಿಂದ ಸಾಹುಕಾರನಿಗೆ ನಷ್ಟವಾಗುತ್ತದೆ ಮತ್ತು ಸಾಲಗಾರರು ಏರಿದ ಬೆಲೆಗಳಲ್ಲಿ ತಮ್ಮ ಸಾಲ-ಸೋಲ ಗಳನ್ನು ಸುಲಭವಾಗಿ ತೀರಿಸಬಹುದು. "ಸಾಲಗಾರರು ಯಾವಾಗಲೂ ಹಣದುಬ್ಬರವನ್ನು ಸ್ವಾಗತಿಸುತ್ತಾರೆ..."[5]

ರೈತರು

ಅಲ್ಪಾವಧಿಯಲ್ಲಿ ಬೆಲೆಯೇರಿಕೆಯಿಂದ ರೈತರಿಗೆ ಅನು ಕೂಲವಾಗುತ್ತದೆ. ಸಾಮಾನ್ಯವಾಗಿ ರೈತರು ಸಾಲಗಾರರ ಗುಂಪಿಗೆ ಸೇರುವುದರಿಂದ ಬೆಲೆಯೇರಿಕೆಯಿಂದ ಅವರಿಗೆ ಲಾಭವೇ ಸಂಧಿಸುತ್ತದೆ.

ವಿತರಣೆ

ಹಣದುಬ್ಬರದ ಸಮಯದಲ್ಲಿ ಲಾಭ ಪಡೆಯುವವರ ಪಾಲು ಕೂಲಿದಾರರು ಮತ್ತು ನಿಶ್ಚಿತ ಆದಾಯದವರ ಪಾಲಿ ಗಿಂತ ಹೆಚ್ಚಾಗಿರುತ್ತದೆ. ಬದಲಾಗುವ ಆದಾಯವನ್ನು ಪಡೆ ಯುವ ಜನರ ಆದಾಯವು ವೃದ್ಧಿಸಿ, ನಿಶ್ಚಿತ ಆದಾಯವರ್ಗದ ಜನರ ವಾಸ್ತವ ಆದಾಯ ಕ್ಷೀಣಿಸುತ್ತದೆ. ಶ್ರೀಮಂತರು, ಮತ್ತೂ ಶ್ರೀಮಂತರಾಗಿ ಬಡವರು ಮತ್ತೂ ದರಿದ್ರ ರಾಗುತ್ತಾರೆ. ಸಮಾಜದ ಸಂಪತ್ತು ವ್ಯಾಪಾರಸ್ಥರು, ಶ್ರೀಮಂತರು, ಸಟ್ಟಾ ವ್ಯಾಪಾರಿಗಳು ಮತ್ತು ಸಾಲಗಾರರ ಕಡೆ ಪ್ರವಹಿಸಿ. ಸಾಲನೀಡಿದವರು ಮತ್ತು ಅನುಭೋಗಿಗಳಿಗೆ

---

5. K. K. Kurihara : 'Monetary theory and Public Policy' p. 54.

ಕುತ್ತಾಗಿ ಪರಿಣಮಿಸುತ್ತದೆ. ಒಂದು ವರ್ಗವನ್ನು ತುಳಿದು ಇನ್ನೊಂದು ವರ್ಗವನ್ನು ರಕ್ಷಿಸುವ ಹಣದುಬ್ಬರ ಪಕ್ಷಪಾತಿ. ತಮ್ಮನ್ನು ತಾವು ರಕ್ಷಿಸಿಕೊಳ್ಳಲಾಗದವರನ್ನೆಲ್ಲಾ ಹಣದುಬ್ಬರ ಬಡಿದು ಹಾಕುತ್ತದೆ.

ಹಣದುಬ್ಬರದ ಸಾಮಾಜಿಕ ಮತ್ತು ರಾಜಕೀಯ ಪರಿಣಾಮಗಳು ಆತಂಕಕಾರಿ. ಹಣದುಬ್ಬರ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗೆ ಪರಿಸ್ಥಿತಿಯನ್ನು ಅಣಿಗೊಳಿಸುತ್ತದೆ. ಆರ್ಥಿಕ ಅಸಮಾನತೆ ಹೆಚ್ಚಿ, ದ್ವೇಷ ಮನಸ್ತಾಪ ಮತ್ತು ಸೆಳೆತ ಹೆಚ್ಚಾಗುತ್ತದೆ. ದೇಶಾಭಿಮಾನಿಗಳು ಮತ್ತು ಪ್ರಾಮಾಣಿಕರ ಬದಲಾಗಿ ದೇಶಾಭಿಮಾನಿಗಳಲ್ಲದವರು ಮತ್ತು ಸ್ವಾರ್ಥಿಗಳು ಸಮಾಜ ವಿರೋಧೀ ಚಟುವಟಿಕೆಗಳನ್ನು ಕೈಗೊಂಡು ಲಾಭ ಪಡೆಯುತ್ತಾರೆ. ರಾಜಕೀಯ ಕ್ಷೇತ್ರದಲ್ಲಿನ ಶಿಸ್ತು ಮಾಯವಾಗಿ ಜನರ ಅಶಾಂತಿ ಹೆಚ್ಚಿ, ಹತಾಶ ಮನೋಭಾವ ಮೂಡಿ ಜನ ಸರ್ಕಾರದ ವಿರುದ್ಧ ದಂಗೆಯೇಳಬಹುದು. ಹಣದುಬ್ಬರ ಸರ್ವಾಧಿಕಾರಕ್ಕೆ ಎಡೆಮಾಡಿಕೊಡುತ್ತದೆ. ಯುದ್ಧಾನಂತರ ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿಯಾಗಿ ತಲೆ ಎತ್ತಲು ಹಣದುಬ್ಬರವೇ ಮುಖ್ಯ ಕಾರಣ. "ಹಿಟ್ಲರ್ ಹಣದುಬ್ಬರದ ಸಾಕು ಮಗ"[6] ಎಂದು ಕರೆಯಲಾಗಿದೆ. ಅಂದ ಮೇಲೆ ಹಣದುಬ್ಬರ ರಾಜಕೀಯ ಬದಲಾವಣೆಗೆ ದಾರಿ ಮಾಡಿ ಕೊಡುತ್ತದೆ.

---

6. Constantinor Bresciant Turroni : 'The Economics of inflation p. 5

ಸಾಮಾಜಿಕ ಪರಿಣಾಮಗಳು

ಅಶಾಂತಿಯ ಬೀಜ ಸಮಾಜದಲ್ಲಿ ಮೊಳಕೆಯಾಗುವುದು ಬೆಲೆಗಳು ಏರಿದಾಗಲೇ. ಬೆಲೆಯೇರಿಕೆಯಿಂದ ಸಾಮಾಜಿಕ ಅಸ್ಥಿರತೆ ತಲೆ ದೋರುತ್ತದೆ. ಕೈಗಾರಿಕಾ ಅಶಾಂತಿಯು ಹೆಚ್ಚಿ, ಮುಷ್ಕರ–ಬೀಗಮುದ್ರೆಗಳು ಸರ್ವೇ ಸಾಮಾನ್ಯವಾಗಿ ಸಂಭವಿಸಿ, ನಿರುದ್ಯೋಗ ಹೆಚ್ಚುವುದಕ್ಕೆ ಹಣದುಬ್ಬರ ಕಾರಣವಾಗುತ್ತದೆ. ಇದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ಜಡತ್ವವುಂಟಾಗಿ ಬೆಳವಣಿಗೆಯ ವೇಗ ನಿಧಾನವಾಗುತ್ತವೆ.

ಹಣದುಬ್ಬರ ಭಯಾನಕ ರೂಪ ತಾಳಿದಾಗ ಬೆಲೆಗಳು ಕುಪ್ಪಳಿಸಿ ಗಗನ ಮುಟ್ಟುತ್ತವೆ. ಹಣದುಬ್ಬರದ ಪರಿಣಾಮವಾಗಿ 1918ರ ನಂತರ ಜರ್ಮನಿಯಲ್ಲಿ ಹಣವು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತು. ಕೈತುಂಬ ಸರಕುಗಳನ್ನು ತರಲು ಜನರು ಗಾಡಿಗಳಲ್ಲಿ ಹಣವನ್ನು ತೆಗೆದುಕೊಂಡು ಹೋಗಬೇಕಾಯಿತು. ಹಿಂದುಳಿದ ದೇಶಗಳಲ್ಲಿ ಹಣದುಬ್ಬರ ಬಂಡವಾಳ ಸಂಚಯನಕ್ಕೆ ಅಡ್ಡಿಯನ್ನುಂಟುಮಾಡಿ ಬೆಳವಣಿಗೆಗೆ ಆತಂಕಗಳನ್ನೊಡ್ಡುತ್ತದೆ. ಹಣದುಬ್ಬರವನ್ನು ತಡೆಗಟ್ಟದೆ, ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳದಿರುವುದು ದುರ್ಬಲ ಹಾಗೂ ಅದಕ್ಷ ಆಡಳಿತದ ಸಂಕೇತ. ಹಣದುಬ್ಬರ ಶಾಶ್ವತವಾಗಿ ಬಹುಕಾಲವಿದ್ದರೆ ಅದು ಅನಿಶ್ಚಯ ಪರಿಸ್ಥಿತಿಯನ್ನು ಸೂಚಿಸುತ್ತದೆ. ಇಂತಹ ಅನಿಶ್ಚಯ ಸನ್ನಿವೇಶದಲ್ಲಿ ತಮ್ಮ ಬಂಡವಾಳವನ್ನು ಹೂಡಲು ವಿದೇಶೀಯರು ಹಿಂಜರಿಯಬಹುದು. "ದೀರ್ಘಾವಧಿಯಲ್ಲಿ ಹಣದುಬ್ಬರವು ಹಿಂದುಳಿದ

ದೇಶಗಳಿಗೆ ಬಹು ಮುಖ್ಯವಾದ ವಿದೇಶೀ ಬಂಡವಾಳವನ್ನು ನಿರುತ್ಸಾಹಗೊಳಿಸುತ್ತದೆ."[7]

ಹಣ ಸಂಚಯನ (Deflation)

ಹಣ್ಣದುಬ್ಬರಕ್ಕೆ ವಿರುದ್ಧವಾದ ಪರಿಸ್ಥಿತಿಯನ್ನು ಹಣ ಸಂಚಯನವೆಂದು ಕರೆಯುತ್ತಾರೆ. ಪಾಲ್ ಎಂಜಿಗ್‌ರವರ ಪ್ರಕಾರ ಹಣ ಸಂಚಯನವು "ಹಣದ ಕೊಳ್ಳುವ ಶಕ್ತಿಯು ಸಂಕೋಚನೆಯು ಬೆಲೆಗಳು ಇಳಿಯಲು ಕಾರಣ ಅಥವಾ ಪರಿಣಾಮವಾಗುವ ಅಸಮತೋಲನ ಸ್ಥಿತಿ''[8] ಪದಾರ್ಥಗಳ ಪೂರೈಕೆ ಅಷ್ಟೇ ಇದ್ದು ಹಣದ ಪ್ರಮಾಣ ಕಡಿಮೆಯಾದರೆ ಬೆಲೆಗಳು ಇಳಿಯುತ್ತವೆ. ಬೆಲೆಗಳು ಇಳಿಯುತ್ತಾ ಹೋಗುವುದು ಹಣದ ಇಳಿತಾಯದ ಲಕ್ಷಣ. ಹಣದ ಚಲಾವಣೆ ತುಂಬಾ ಕಡಿಮೆಯಾಗುವುದರಿಂದ ಇಂತಹ ಪರಿಸ್ಥಿತಿ ಉದ್ಭವಿಸುತ್ತದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿ ಬೇಡಿಕೆಗಿಂತ ಪೂರೈಕೆ ಹೆಚ್ಚಾಗಿರುತ್ತದೆ. ಹಣದ ಇಳಿತಾಯದಿಂದ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿ ನಿರುದ್ಯೋಗ ಉಂಟಾಗುತ್ತದೆ; ಉತ್ಪಾದನೆ ಕುಂಠಿತಗೊಳ್ಳುತ್ತದೆ. ಬೆಲೆ ಇಳಿದಂತೆ ಉತ್ಪಾದಕರ ಲಾಭ ಕಡಿಮೆಯಾಗುತ್ತದೆ ಮತ್ತು ಬಂಡವಾಳ ಹೂಡಿಕೆಗೆ ಉತ್ತೇಜನವಿಲ್ಲದಂತಾಗಿ ಉತ್ಪಾದನೆಯ ಮಟ್ಟ ಇಳಿಯುತ್ತದೆ. ಬೆಲೆಗಳು ಇಳಿಮುಖವಾದಂತೆ ಕೂಲಿ ಮೊದಲಾದ ನಿಗದಿ

---

7. U N Department of Economic Affairs- Measures for the Economic Development of Under-developed Countries. p. 42
8. Paul Einzig inflation p. 22


ಯಾದ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಿಲ್ಲದಿರುವುದರಿಂದ ಉತ್ಪಾದಕರಿಗೆ ನಷ್ಟ ಸಂಭವಿಸುತ್ತದೆ.

ಹಣದುಬ್ಬರದಿಂದ ಉಂಟಾಗುವ ಬೆಲೆಯೇರಿಕೆಯನ್ನು ತಡೆಗಟ್ಟಲು ಉಪಯೋಗಿಸುವ ಕ್ರಮವನ್ನು ಪ್ರತಿ ಪ್ರಸರಣ (Disinflation) ಎಂದು ಕರೆಯುತ್ತಾರೆ. ಈ ವಿಧಾನದಲ್ಲಿ ಬೆಲೆಯೇರಿಕೆಯನ್ನು ಹಣದ ಪ್ರಮಾಣವನ್ನು ಕುಗ್ಗಿಸುವುದರ ಮೂಲಕ ತಡೆಗಟ್ಟಲಾಗುತ್ತದೆ. ಹಣದ ಪ್ರಮಾಣವನ್ನು ಕಡಿಮೆ ಮಾಡಿದಾಗ ಬೆಲೆಗಳು ಅದಕ್ಕೆ ತತ್ಸಮಾನವಾಗಿ ಕೆಳಗಿಳಿಯುತ್ತವೆ. ಆರ್ಥಿಕ ವ್ಯವಸ್ಥೆ ಹಣದ ಸಂಚಯನದಿಂದ ಬಳಲುತ್ತಿದ್ದಾಗ ಹಣದ ಪೂರೈಕೆಯನ್ನು ಹೆಚ್ಚಿಸಿ ಬೆಲೆಗಳು ಕೆಳಗಿಳಿಯದಂತೆ ಮಾಡಿ ಅರ್ಥವ್ಯವಸ್ಥೆಗೆ ಪುನಶ್ಚೇತನ ಕೊಡುವ ಕ್ರಮವನ್ನು 'ಹಿಗ್ಗು ಪ್ರಸರಣ' (Reflation) ಎಂದು ಕರೆಯುತ್ತಾರೆ.

ಹಣದ ಇಳಿತಾಯವು ಸಮಾಜಕ್ಕೆ ಕೇಡನ್ನುಂಟು ಮಾಡುತ್ತದೆ. ಅಲ್ಲದೆ ಉತ್ಪಾದನೆ, ವ್ಯಾಪಾರ ಚಟುವಟಿಕೆ ಮತ್ತು ಉದ್ಯೋಗದ ಮೇಲೆ ಪ್ರತಿಕೂಲ ಪರಿಣಾಮಗಳನ್ನುಂಟು ಮಾಡುತ್ತದೆ. ಬೆಲೆಯೊಂದಿಗೆ ಉತ್ಪಾದನಾ ವೆಚ್ಚವು ಇಳಿಯದಿರುವುದರಿಂದ ಉತ್ಪಾದಕರು ಭಾರೀ ನಷ್ಟವನ್ನು ಅನುಭವಿಸುತ್ತಾರೆ. ಅವರಲ್ಲಿ ನಿರಾಸೆ ತಲೆದೋರುತ್ತದೆ. ಸಮೃದ್ಧಿಯ ಮಧ್ಯೆ ಬಡತನ ತಲೆದೋರಲು ಬೇಡಿಕೆಯ ಕೊರತೆ ಕಾರಣವೇ ವಿನಾ ಉತ್ಪಾದನಾ ಸಾಮಗ್ರಿಗಳ ಕೊರತೆಯೇನಲ್ಲ. ಹಣದುಬ್ಬರದಂತೆಯೇ ಹಣದ ಇಳಿತಾಯ ಕೂಡ ಹಂಚಿಕೆಯಮೇಲೆ ದುಷ್ಪರಿಣಾಮಗಳನ್ನುಂಟುಮಾಡು

ತ್ತದೆ. ಹಣದುಬ್ಬರಕ್ಕೆ ವಿರೋಧವಾದ ಪರಿಣಾಮಗಳು ಹಣದ ಇಳಿತಾಯದಿಂದ ಉಂಟಾಗುತ್ತದೆ. ಹಣ ಸಂಚಯನವು ಅನುಭೋಗಿಗಳನ್ನೂ, ಮಧ್ಯಮ ವರ್ಗದ ಜನರನ್ನೂ ರಕ್ಷಿಸುತ್ತದೆ. ನಿರುದ್ಯೋಗ ಮತ್ತು ಸಾಮಾಜಿಕ ಅಶಾಂತಿಯನ್ನು ಹೆಚ್ಚಿಸುವುದರಿಂದ ಹಣ ಸಂಚಯನವು ಹಣದುಬ್ಬರಕ್ಕಿಂತ ದುಷ್ಪರಿಣಾಮಕಾರಿ.

ಹಣದುಬ್ಬರ ಮತ್ತು ಹಣ ಸಂಚಯನವನ್ನು ಈ ಕೆಳಗಿನ ರೇಖಾಚಿತ್ರದಿಂದ ತಿಳಿದುಕೊಳ್ಳಬಹುದು.



ಹೋಲಿಕೆ ವ್ಯತ್ಯಾಸಗಳು

ಹಣದುಬ್ಬರ ಮತ್ತು ಹಣ ಸಂಚಯನ—ಈ ಎರಡೂ ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಒಳ್ಳೆಯದಲ್ಲ. "ಹಣದುಬ್ಬರ ಅನ್ಯಾಯವಾದುದು ; ಹಣ ಸಂಚಯನ ಅನುಚಿತವಾದುದು. ಈ ಎರಡರ ಪೈಕಿ ಹಣ ಸಂಚಯನ ಅತಿ ಕೆಡುಕಾದುದು."[9]

ಈ ಎರಡೂ ಸಾಮಾಜಿಕ ಅಸಮತೆಯನ್ನುಂಟುಮಾಡಿ, ಉತ್ಪಾದನೆ ಮತ್ತು ವಿತರಣೆಯನ್ನು ಹದಗೆಡಿಸುತ್ತವೆ. ಅರ್ಥ ವ್ಯವಸ್ಥೆಯ ಮೇಲೆ ಈ ಎರಡರ ಪರಿಣಾಮಗಳು ಹೀಗಿವೆ :

1. ಹಣದುಬ್ಬರ ಬಡವರನ್ನು ಕೊಳ್ಳೆಹೊಡೆದು ಶ್ರೀಮಂತರಿಗೆ ನೆರವಾಗುತ್ತದೆ. ಹಣ ಸಂಚಯನವು ಉತ್ಪಾದನೆ, ರಾಷ್ಟ್ರೀಯ ಆದಾಯ ಮತ್ತು ಉದ್ಯೋಗಗಳನ್ನು ಕುಗ್ಗಿಸುತ್ತದೆ.
2. ಹಣದುಬ್ಬರವು ಬಡವ–ಬಲ್ಲಿದರ ನಡುವಣ ಆದಾಯ ಮತ್ತು ಸಂಪತ್ತಿನ ಅಂತರವನ್ನು ಹೆಚ್ಚಿಸುತ್ತದೆ. ಹಣ ಸಂಚಯನವು ಇಡೀ ಸಮಾಜವನ್ನು ದಿವಾಳಿಯೆಬ್ಬಿಸುತ್ತದೆ.
3. ಹಣದುಬ್ಬರ ಪ್ರತಿಗಾಮಿಯಾದುದು ; ಏಕೆಂದರೆ ಇದಕ್ಕೆ ಬಲಿಯಾಗುವವರು ತಮ್ಮನ್ನು ತಾವು ರಕ್ಷಿಸಿ ಕೊಳ್ಳಲಾಗದ ಬಡಜನತೆ. ಹಣ ಸಂಚಯನವು ಆರ್ಥಿಕ ಮುಗ್ಗಟ್ಟಿಗೆ ಎಡೆಮಾಡಿಕೊಡುತ್ತದೆ.

---

9. Keynes J. M. : A Tract on Monetary Reform p. 44-45.

4. ಹಣದುಬ್ಬರ ಜನರ ಅನುಭೋಗವನ್ನು ಕಡಿಮೆಗೊಳಿಸಿ ಜನಜೀವನ ಮಟ್ಟವನ್ನು ಕುಗ್ಗಿಸುತ್ತದೆ. ಇದು ತೆರೆಮರೆಯ ಬಲವಂತದ ತೆರಿಗೆ. ಹಣದುಬ್ಬರ ಅನ್ಯಾಯವಾದುದು. ಆದರೆ ಒಮ್ಮೆ ಪ್ರಾರಂಭವಾದ ಹಣ ಸಂಚಯನವು ಇಳಿಮುಖ ಪ್ರವೃತ್ತಿಯಲ್ಲಿ ತೊಡಗಿ ಅರ್ಥವ್ಯವಸ್ಥೆಯನ್ನು ಹಾನಿಗೀಡು ಮಾಡುತ್ತದೆ. ಭಾರೀ ಪ್ರಮಾಣದ ನಿರುದ್ಯೋಗ ವಿಪತ್ಕಾರಿ.
5. ಹಣದುಬ್ಬರವು ಜನರ ನೈತಿಕ ಸ್ಥೈರ್ಯ, ದುಡಿಯುವ ಮತ್ತು ಉಳಿಸುವ ಮನೋಭಾವವನ್ನು ಕುಗ್ಗಿಸುತ್ತದೆ. ಹಣ ಸಂಚಯನವೂ ಸಹಾ ಜನರ ನೈತಿಕ ಸ್ಥೈರ್ಯವನ್ನು ಕುಗ್ಗಿಸಿ ಹತಾಶ ಮನೋಭಾವವನ್ನು ಮೂಡಿಸುತ್ತದೆ.

ಇಷ್ಟಾದರೂ ಹಣದುಬ್ಬರ ಹಣದ ಇಳಿತಾಯಕ್ಕಿಂತ ಉತ್ತಮವಾದುದು, ಎಂದು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಈ ಎರಡರ ಪೈಕಿ ಹಣದುಬ್ಬರ ಉತ್ತಮ ಎಂದು ಕೀನ್ಸ್ ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಹಣದುಬ್ಬರದ ಪರಿಣಾಮಗಳು ಹಣ ಸಂಚಯನದ ಪರಿಣಾಮಗಳಷ್ಟು ತೀವ್ರವಾದುವಲ್ಲ.

ಹಣದುಬ್ಬರ ರಾಷ್ಟ್ರೀಯ ಆದಾಯವನ್ನು ಕುಗ್ಗಿಸುವುದಿಲ್ಲ. ಹಣ ಸಂಚಯನವು ರಾಷ್ಟ್ರೀಯ ಆದಾಯವನ್ನು ಕಡಿಮೆಗೊಳಿಸುತ್ತದೆ. ಹಣದುಬ್ಬರವಿದ್ದಾಗ ಉತ್ಪಾದನಾಂಗಗಳು ಒಂದಲ್ಲ ಒಂದು ಉದ್ಯೋಗದಲ್ಲಿ ತೊಡಗಿರುತ್ತವೆ. ಹಣ

ಸಂಚಯನ ನಿರುದ್ಯೋಗಕ್ಕೆ ಕಾರಣ. ಹಣದುಬ್ಬರವನ್ನು ನಿಯಂತ್ರಿಸಿದಷ್ಟು ಸುಲಭವಾಗಿ ಹಣ ಸಂಚಯನವನ್ನು ನಿಯಂತ್ರಿಸಲು ಸಾಧ್ಯವಿಲ್ಲ. ಏಕೆಂದರೆ ನಿರಾಸೆಯಿದ್ದಾಗ ಏನು ಮಾಡಲೂ ಸಾಧ್ಯವಿಲ್ಲ. ಸಾಧಾರಣವಾದ ಹಣದುಬ್ಬರ ಬೆಳವಣಿಗೆಗೆ ಸಹಕಾರಿ. ಆದ್ದರಿಂದಲೇ ಹಣದುಬ್ಬರ ಹಣ ಸಂಚಯನಕ್ಕಿಂತ ಉತ್ತಮ ಎಂಬುದು ಕೀನ್ಸರ ಅಭಿಮತ. ಆದರೆ ಹಣದುಬ್ಬರ ಅಪಾಯಕಾರಿಯಾದುದರಿಂದ ಅದನ್ನು ತಡೆಯಬೇಕು ಎಂಬುದನ್ನು ಎಲ್ಲ ಪಂಡಿತರೂ ಒಪ್ಪಿಕೊಂಡಿದ್ದಾರೆ.

ಹಣದುಬ್ಬರ ಮತ್ತು ಆರ್ಥಿಕ ಅಭಿವೃದ್ಧಿ

ಹಣದುಬ್ಬರ ಅಭಿವೃದ್ಧಿಗೆ ಸಹಾಯಕವೇ ಇಲ್ಲವೇ ಎಂಬ ಬಗ್ಗೆ ಪಂಡಿತರಲ್ಲಿ ಏಕಾಭಿಪ್ರಾಯವಿಲ್ಲ. ಕೀನ್ಸರೂ ಸೇರಿದಂತೆ ಅನೇಕ ಪಂಡಿತರು ಹಣದುಬ್ಬರ ಆರ್ಥಿಕಾಭಿವೃದ್ಧಿಗೆ ಸಹಾಯಕಾರಿ ಎಂದಿದ್ದಾರೆ. ಉಳಿತಾಯ ಮಾಡುವ ಸಾಮರ್ಥ್ಯವನ್ನು ಹೊಂದಿರದ ಬಡವರಿಂದ ಉಳಿಸುವ ಸಾಮರ್ಥ್ಯವನ್ನು ಹೊಂದಿರುವ ಶ್ರೀಮಂತರಿಗೆ ಹಣದುಬ್ಬರವು ಆದಾಯವನ್ನು ವರ್ಗಾಯಿಸುತ್ತದೆ. ಇದು ಬಂಡವಾಳ ಹೂಡಿಕೆ, ಉತ್ಪಾದನೆ ಮತ್ತು ಉದ್ಯೋಗಗಳನ್ನು ವೃದ್ಧಿಸುತ್ತದೆ. ಸಾಧಾರಣವಾದ ಹಣದುಬ್ಬರ ಒಳ್ಳೆಯದು ; ಏಕೆಂದರೆ ಅದು ಆಶಾದಾಯಕ ವಾತಾವರಣವನ್ನು ಮೂಡಿಸುತ್ತದೆ. ಹಣದುಬ್ಬರಕ್ಕೆ ಕಾರಣವಾದ ಹಣಸೃಷ್ಟಿ ಒಳ್ಳೆಯದಲ್ಲ. ಆದರೂ ಇದು ಸರ್ಕಾರಿ ಆದಾಯವನ್ನು ಹೆಚ್ಚಿಸುವ ಸುಲಭಮಾರ್ಗವಾಗಿದ್ದು, ಹೂಡಿಕೆಯ ಕೊರತೆಯನ್ನು ನೀಗುತ್ತದೆ. ಉತ್ಪಾದಕ ಉದ್ದೇಶಗಳಿಗೆ ಬಳಸಲ್ಪಟ್ಟ ಹಣ ಸೃಷ್ಟಿ ಉತ್ಪಾದನೆಯನ್ನು

ಹೆಚ್ಚಿಸುತ್ತದೆ; ಅಂತಿಮವಾಗಿ ಇದು ಒಳ್ಳೆಯದೇ ಎಂದು ಪ್ರೊಫೆಸರ್ ಲಿವೀಸ್ (Lewis) ಅಭಿಪ್ರಾಯಪಟ್ಟಿದ್ದಾರೆ.

ಹಣದುಬ್ಬರ ಆರ್ಥಿಕ ಬೆಳವಣಿಗೆಯ ಫಲ ಎಂದು ಸಹ ಹೇಳಬಹುದು. ಬೆಳವಣಿಗೆಯೊಂದಿಗೆ ಹಣದುಬ್ಬರ ಅನಿವಾರ್ಯ ಎಂಬುದು ಕೆಲವರ ನಂಬಿಕೆ. ಏಕೆಂದರೆ ಬೆಳವಣಿಗೆಯೊಂದಿಗೆ ಜನರ ಆದಾಯ–ಅನುಭೋಗಗಳು ಹೆಚ್ಚಿ ಅದೇ ವೇಗದಲ್ಲಿ ಪದಾರ್ಥಗಳ ಪೂರೈಕೆ ಹೆಚ್ಚದೇ ಹೋಗಬಹುದು. ಬೆಲೆಯೇರಿಕೆ ಜನತೆ ಅಭಿವೃದ್ಧಿಗೆ ತರುವ ಬೆಲೆ ಎಂದು ಹೇಳಬಹುದು.

ಹಣದುಬ್ಬರ ಬೆಳವಣಿಗೆಗೆ ಸಹಾಯಕವಲ್ಲ, ಬದಲಾಗಿ ಬೆಳವಣಿಗೆಯನ್ನು ತಡೆಯುತ್ತದೆ ಎಂದು ಕೆಲವು ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. "ಬೆಳವಣಿಗೆಯೊಂದಿಗೆ ಹಣದುಬ್ಬರ ಅನಿವಾರ್ಯವೇನಲ್ಲ"[10] ಎಂದು ಮಿಲ್ಟನ್ ಫ್ರೀಡ್‌ಮನ್ ಬರೆದಿದ್ದಾರೆ. ಹಿಂದಿನ ಹಣದುಬ್ಬರಗಳು ಅನುಕೂಲಕಾರಿಯಾಗಲು ಅವು ಅನಿರೀಕ್ಷಿತವಾಗಿ ಸಂಭವಿಸಿದ್ದೇ ಕಾರಣ. ಬೇಕೇಬೇಕೆಂದು ಉಂಟುಮಾಡುವ ಹಣದುಬ್ಬರ ನಿಷ್ಪ್ರಯೋಜಕ. ಏಕೆಂದರೆ ಜನತೆಗೆ ಎಲ್ಲವೂ ಮೊದಲೇ ತಿಳಿದಿದ್ದು ಅದಕ್ಕೆ ಹೊಂದಿಕೊಂಡು ಬಿಡುತ್ತಾರೆ. "ಹಣದುಬ್ಬರ ಬಂಡವಾಳ ಸಂಚಯನದ ಸಾಧನವಾಗುವುದು ಅದು ಎಷ್ಟರ ಮಟ್ಟಿಗೆ ಅನಿರೀಕ್ಷಿತ ಎಂಬುದನ್ನು ಅವಲಂಬಿಸಿದೆ......"[11]

---

10. Milton Friedman — Inflation, Causes and Consequences p. 17
11. Ragnar Nurkse : League of Nations Course and Control of Inflation p. 67

ಹಣದುಬ್ಬರವು ಉಳಿತಾಯ, ಬಂಡವಾಳ ಸಂಚಯನ, ಉತ್ಪಾದನೆಯ ಹೆಚ್ಚಳ ಮುಂತಾವುದಕ್ಕೆ ಪ್ರೇರಕವಲ್ಲ. ಅದು ಆರ್ಥಿಕ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸಲಾರದು. ಅಲ್ಪ ಪ್ರಮಾಣದ ಹಣದುಬ್ಬರ ಕೂಡ ಅರ್ಥವ್ಯವಸ್ಥೆಯ ದೌರ್ಬಲ್ಯವನ್ನು ಸೂಚಿಸುತ್ತದೆ. ಆದುದರಿಂದ ಸಮಗ್ರ ಸಮಾಜದ ಹಿತದೃಷ್ಟಿಯಿಂದ ಹಣದುಬ್ಬರ ಹಿತಕಾರಿಯಲ್ಲ.

ಹತೋಟಿ ಕ್ರಮಗಳು

ಬೆಲೆಯೇರಿಕೆ ಆರ್ಥಿಕ ಮತ್ತು ಸಾಮಾಜಿಕ ಪೀಡೆ. ಅಂತೆಯೇ ಹಣ ಸಂಚಯನ ಕೂಡ. ಇವನ್ನು ಮೊಳಕೆಯಲ್ಲೇ ಚಿವುಟಿಹಾಕಬೇಕು. ಇಲ್ಲದಿದ್ದರೆ ಅವು ಆರ್ಥಿಕ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತವೆ. ಹಣದುಬ್ಬರವನ್ನು ತಡೆಯಲು ಕೈಗೊಳ್ಳುವ ಕ್ರಮಗಳನ್ನು ಹಣದುಬ್ಬರ ವಿರೋಧೀ ಕ್ರಮಗಳೆಂದು ಕರೆಯುವುದುಂಟು. ಹಣದುಬ್ಬರ ಪಿಶಾಚಿಯನ್ನು ಯಾವುದಾದರೂ ಒಂದು ಕ್ರಮವನ್ನು ಕೈಗೊಂಡು ಓಡಿಸಲಾಗುವುದಿಲ್ಲ. ಹಲವಾರು ದಿಕ್ಕುಗಳಿಂದ ಇದನ್ನು ಆಕ್ರಮಿಸಿ ತಲೆ ಎತ್ತದಂತೆ ಮಾಡಬೇಕು. ಮುಖ್ಯವಾಗಿ ಅರ್ಥಶಾಸ್ತ್ರಜ್ಞರು ಎರಡು ಕ್ರಮಗಳನ್ನು ಸಲಹೆ ಮಾಡಿದ್ದಾರೆ.

1. ಉತ್ಪಾದನೆಯನ್ನು ಹೆಚ್ಚಿಸುವುದು.
2. ಬೇಡಿಕೆಯನ್ನು ತಗ್ಗಿಸುವುದು

ಗುರಿ ಒಂದೇ ಆದರೂ ಅದನ್ನು ತಲುಪಲು ಹಲವಾರು ಮಾರ್ಗಗಳುಂಟು. ಅವೆಂದರೆ–

1. ಹಣಕಾಸು ನೀತಿ
2. ರಾಜ್ಯಕೋಶ ನೀತಿ
3. ಬೆಲೆ ಹತೋಟಿ ಹಾಗೂ ಪಡಿತರ ಕ್ರಮಗಳು

ಹಣಕಾಸು ನೀತಿ

ಹಣಕಾಸು ನೀತಿ ಎಂದರೆ ಕೇಂದ್ರ ಬ್ಯಾಂಕಿನ ನೀತಿ. ಹಣದ ಬೆಲೆಯ ಸ್ಥಿರತೆಯನ್ನು ಕಾಪಾಡುವುದು ಕೇಂದ್ರ ಬ್ಯಾಂಕಿನ ಕರ್ತವ್ಯಗಳಲ್ಲೊಂದು. ಇದನ್ನು ಸಾಧಿಸಲು ಕೇಂದ್ರ ಬ್ಯಾಂಕು ತನ್ನ ಬತ್ತಳಿಕೆಯ ವಿವಿಧ ಅಸ್ತ್ರಗಳನ್ನು ಬಳಸುತ್ತದೆ. ಅವೆಂದರೆ,

1. ಬ್ಯಾಂಕ್ ರೇಟ್ ನೀತಿ
2. ತೆರೆದ ಪೇಟೆ ವ್ಯವಹಾರ
3. ನಗದು ಸಂಚಿತ ಅನುಪಾತದ ವ್ಯತ್ಯಾಸ ಮುಂತಾದವು.

ಕೇಂದ್ರ ಬ್ಯಾಂಕು, ತೀರುವೆ ಮನೆಗಳು ಅಥವಾ ವಾಣಿಜ್ಯ ಬ್ಯಾಂಕುಗಳು ಹಾಜರು ಪಡಿಸಿದ ಮೊದಲದರ್ಜೆಯ ವ್ಯಾಪಾರ ಪತ್ರಗಳನ್ನು ಮರು ಮುರಿಯುವ (Re-discount) ಕನಿಷ್ಟ ದರವನ್ನು 'ಬ್ಯಾಂಕ್‌ರೇಟ್' ಎಂದು ಕರೆಯಬಹುದು. ಕೇಂದ್ರ ಬ್ಯಾಂಕು ಅಂತಿಮ ಋಣದಾತ. ತಮಗೆ ಹೆಚ್ಚು ನಗದು ಹಣ ಬೇಕಾದಾಗ ವಾಣಿಜ್ಯ ಬ್ಯಾಂಕುಗಳು ಕೇಂದ್ರ ಬ್ಯಾಂಕಿನ ಹೊರೆ ಹೋಗಿ, ತಮ್ಮಲ್ಲಿರುವ ಸೆಕ್ಯುರಿಟಿಗಳು, ಹಾಗೂ ಭದ್ರತಾ ಪತ್ರಗಳನ್ನು ಕೇಂದ್ರ ಬ್ಯಾಂಕಿನಲ್ಲಿ ಮುರಿಯಿಸುತ್ತವೆ, ಅಥವಾ

ತಮ್ಮ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿ ಮುಂಗಡ ಪಡೆಯುತ್ತವೆ. ಈ ಎರಡು ಸಂದರ್ಭಗಳಲ್ಲೂ ಕೆಂದ್ರಬ್ಯಾಂಕು ವಾಣಿಜ್ಯ ಬ್ಯಾಂಕುಗಳ ನಗದು ಪ್ರಮಾಣವನ್ನು ಹೆಚ್ಚಿಸುತ್ತವೆ. ಈ ಸೇವೆಗೆ ಕೇಂದ್ರಬ್ಯಾಂಕು ವಿಧಿಸುವ ದರವನ್ನೇ ಬ್ಯಾಂಕ್ ರೇಟ್ ಅಥವಾ ಮುರಿಯುವ ದರವೆಂದು ಕರೆಯಲಾಗಿದೆ.

ದೇಶದಲ್ಲಿ ಹಣದುಬ್ಬರವಿದೆ ಅಥವಾ ಬ್ಯಾಂಕ್ ಸಾಲ ಹೆಚ್ಚಿದೆಯೆನ್ನುವ ಅಭಿಪ್ರಾಯ ಕೇಂದ್ರ ಬ್ಯಾಂಕಿಗೆ ಬಂದೊಡನೆ ಅದು ಬ್ಯಾಂಕ್ ರೇಟನ್ನು ಹೆಚ್ಚಿಸುತ್ತದೆ. ತಕ್ಷಣ ವಾಣಿಜ್ಯ ಬ್ಯಾಂಕುಗಳು ಬಡ್ಡಿದರವನ್ನು ಹೆಚ್ಚಿಸುತ್ತವೆ. ಬಡ್ಡಿದರ ಏರಿಕೆ ಸಾಲ ಪಡೆಯುವವರನ್ನು ನಿರುತ್ಸಾಹಗೊಳಿಸುತ್ತದೆ. ಬಡ್ಡಿದರ ಏರಿಕೆ ಲಾಭಾಂಶವನ್ನು ಕಡಿಮೆಗೊಳಿಸಬಹುದು ಅಥವಾ ಲಾಭವೇ ಸಿಗದಂತೆ ಮಾಡಬಹುದಾದ್ದರಿಂದ, ವ್ಯಾಪಾರಸ್ಥರು ಮತ್ತು ವಾಣಿಜ್ಯೋದ್ಯಮಿಗಳು ಸಾಲ ಪಡೆಯುವುದನ್ನು ಕಡಿಮೆ ಮಾಡುತ್ತಾರೆ. ಮಧ್ಯವರ್ತಿಗಳು ಬ್ಯಾಂಕ್ ಸಾಲವನ್ನು ಪಡೆದು ಸರಕುಗಳನ್ನು ಸಂಗ್ರಹಿಸಿಟ್ಟುಕೊಂಡಿರುತ್ತಾರೆ. ಬಡ್ಡಿ ದರ ಹೆಚ್ಚಾದಾಗ ಅವರು ಸರುಕುಗಳನ್ನು ಮಾರಿ ಹಣವನ್ನು ಪಡೆಯಬೇಕಾಗುತ್ತದೆ. ಸಟ್ಟಾ ಮಾರುಕಟ್ಟೆಯಲ್ಲಿಯೂ ಕೂಡ ಇದೇ ರೀತಿಯ ಬದಲಾವಣೆಗಳಾಗುತ್ತವೆ. ಇದರಿಂದ ಆದಾಯ, ವೆಚ್ಚ, ಬೇಡಿಕೆ ಮುಂತಾದುವು ಕಡಿಮೆಯಾಗಿ ಬೆಲೆಗಳು ಇಳಿಯುತ್ತವೆ. ಬ್ಯಾಂಕ್‌ರೇಟ್ ಇಳಿದರೆ ವಾಣಿಜ್ಯ ಬ್ಯಾಂಕುಗಳ ಬಡ್ಡಿದರವೂ ಇಳಿಯುತ್ತದೆ. ಸಾಲ ಪಡೆಯುವವರು ಉತ್ತೇಜಿತರಾಗಿ ಹೆಚ್ಚು ಸಾಲ ಪಡೆಯುತ್ತಾರೆ. ಬಂಡವಾಳ ಹೂಡಿಕೆ, ಉತ್ಪಾದನೆ, ಉದ್ಯೋಗ, ಆದಾಯ, ಬೇಡಿಕೆಗಳು ಹೆಚ್ಚಿ ಬೆಲೆಗಳೂ ಹೆಚ್ಚುತ್ತವೆ. ಮುಖ್ಯವಾಗಿ ಬ್ಯಾಂಕ್

ರೇಟ್ ವ್ಯತ್ಯಾಸವು ಮಾನಸಿಕ ಬದಲಾವಣೆಗಳನ್ನುಂಟುಮಾಡು ತ್ತದೆ. ಇದು ಸರ್ಕಾರದ ನೀತಿಯನ್ನು ಪ್ರತಿಬಿಂಬಿಸುತ್ತದೆ. "ಬ್ಯಾಂಕ್‌ರೇಟ್ ಏರಿಕೆ ಸಾಂಕೇತಿಕ; ಹಣದುಬ್ಬರವನ್ನು ತಡೆ ಯಲು ಅಪ್ರಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂಬುದಕ್ಕೆ ಸಾಕ್ಷಿ" ಎಂದು ರ್‍ಯಾಡ್ ಕ್ಲಿಫ್ ಸಮಿತಿಯು ತಿಳಿಸಿದೆ.

ಹಣದುಬ್ಬರವಿದ್ದಾಗ ಕೇಂದ್ರ ಬ್ಯಾಂಕು ಹುಂಡಿಗಳನ್ನು ಮಾರುಕಟ್ಟೆಯಲ್ಲಿ ಮಾರಿ, ವಾಣಿಜ್ಯ ಬ್ಯಾಂಕುಗಳು ಸಾಲ ಸೃಷ್ಟಿ ಸುವ ಸಾಮರ್ಥ್ಯಕ್ಕೆ ಕಡಿವಾಣವನ್ನು ಹಾಕಿ ಬೆಲೆಗಳು ಇಳಿಯು ವಂತೆ ಪ್ರೇರೇಪಿಸುತ್ತದೆ. ಹಣ ಸಂಚಯನವಿದ್ದಾಗ ಕೇಂದ್ರ ಬ್ಯಾಂಕು ಹುಂಡಿಗಳನ್ನು ವಾಣಿಜ್ಯ ಬ್ಯಾಂಕುಗಳಿಂದ ಕೊಂಡು ಅವುಗಳ ಸಾಲ ಸೃಷ್ಟಿಸುವ ಸಾಮರ್ಥ್ಯವನ್ನು ಹೆಚ್ಚಿಸಿ ಬೆಲೆ ಯೇರಿಕೆಯನ್ನು ಪ್ರೇರೇಪಿಸುತ್ತದೆ.

ಅಲ್ಲದೆ ಹಣದುಬ್ಬರವಿದ್ದಾಗ ವಾಣಿಜ್ಯ ಬ್ಯಾಂಕುಗಳು ತಮ್ಮಲ್ಲಿ ಇಡಬೇಕಾದ ನಗದು ಹಣದ ಪ್ರಮಾಣವನ್ನು ಹೆಚ್ಚಿಸು ತ್ತದೆ. ಪರಿಣಾಮವಾಗಿ ವಾಣಿಜ್ಯ ಬ್ಯಾಂಕುಗಳ ಸಾಲ ಸೃಷ್ಟಿ ಸುವ ಸಾಮರ್ಥ್ಯ ಕುಗ್ಗಿ ಬೆಲೆಗಳು ಇಳಿಯಲು ಪ್ರಾರಂಭಿಸು ತ್ತವೆ. ಹಣದ ಸಂಚಯನವಿದ್ದಾಗ ಈ ನಗದಿನ ಪ್ರಮಾಣ ವನ್ನು ಕೇಂದ್ರ ಬ್ಯಾಂಕು ಕಡಿಮೆಗೊಳಿಸಿ, ವಾಣಿಜ್ಯ ಬ್ಯಾಂಕು ಗಳ ಸಾಲ ಸೃಷ್ಟಿಸುವ ಸಾಮರ್ಥ್ಯವನ್ನು ಹೆಚ್ಚಿಸಿ ಬೆಲೆಗಳು ಏರಲು ಪ್ರೇರಕವಾಗುತ್ತದೆ.

ಹಣದುಬ್ಬರ ಮತ್ತು ಹಣದ ಇಳಿತಾಯದ ವಿರುದ್ಧ ಕೇಂದ್ರಬ್ಯಾಂಕು ಕೈಗೊಳ್ಳುವ ಕ್ರಮಗಳ ಪೈಕಿ ಸಾಲ ಪಡಿತರ,

ನೇರ ಹತೋಟಿ, ಅನುಭೋಗಿ ಸಾಲದ ವ್ಯವಸ್ಥೆ, ನೈತಿಕ ಪ್ರಭಾವ, ಆಯ್ಕೆಯ ವಿಧಾನ ಮುಂತಾದವು ಸೇರಿವೆ. ಇವನ್ನು ಗುಣಾತ್ಮಕ ಸಾಲ ಹತೋಟಿ ವಿಧಾನಗಳೆಂದು ಕರೆಯಲಾಗಿದೆ. ಕೇಂದ್ರ ಬ್ಯಾಂಕು ಕೆಲವು ಆಯ್ದ ಉದ್ದೇಶಗಳಿಗೆ ಸಾಲವನ್ನು ನಿರ್ಬಂಧಿಸಬಹುದು. ತನ್ನಿಂದ ವಾಣಿಜ್ಯ ಬ್ಯಾಂಕುಗಳು ಪಡೆಯಬಹುದಾದ ಸಾಲದ ಪ್ರಮಾಣವನ್ನು ನಿಗದಿಪಡಿಸಿ ಆ ಮಿತಿಗಿಂತ ಹೆಚ್ಚು ನೆರವನ್ನು ನೀಡದೇ ಹೋಗಬಹುದು. ಕೇಂದ್ರ ಬ್ಯಾಂಕು ಸಾಲವನ್ನು ಪಡಿತರಕ್ಕೆ ಒಳಪಡಿಸಬಹುದು. (Credit Rationing). ಮೇಲಾಗಿ, ತನ್ನ ಪ್ರಭಾವವನ್ನು ಬೀರಿ ಕಾರ್ಯಕ್ರಮಗಳಲ್ಲಿ ಸಹಕರಿಸುವಂತೆ ವಾಣಿಜ್ಯಬ್ಯಾಂಕು ಗಳನ್ನು ಒತ್ತಾಯಿಸಬಹುದು. ಇದನ್ನು ನೈತಿಕ ಪ್ರಭಾವ ಎನ್ನುತ್ತೇವೆ. ಈ ಅಂಶ ಕೇಂದ್ರ ಬ್ಯಾಂಕಿನ ಗೌರವ ಹಾಗೂ ಸ್ಥಾನಮಾನವನ್ನವಲಂಬಿಸಿರುತ್ತದೆ. ತನ್ನ ನಿರ್ದೇಶನಗಳನ್ನು ಅಚರಿಸಿದ ಬ್ಯಾಂಕುಗಳ ಮೇಲೆ ಕೇಂದ್ರ ಬ್ಯಾಂಕು ನೇರ ಕ್ರಮ ಗಳು, ಹೆಚ್ಚು ಬಡ್ಡಿದರವನ್ನು ವಿಧಿಸುವುದು, ಸಾಲ ನೀಡಿಕೆ ಯನ್ನು ನಿಲ್ಲಿಸುವುದು—ಮುಂತಾದುವನ್ನು ಕೈಗೊಳ್ಳಬಹುದು. ಇವು ಕೇಂದ್ರ ಬ್ಯಾಂಕಿನ ನೇರ ಕ್ರಮಗಳು.

ಆದರೆ ಮೇಲಿನ ಕ್ರಮಗಳು ಪರಿಣಾಮಕಾರಿಯಲ್ಲ. ಎಲ್ಲೆಲ್ಲೂ ಆರ್ಥಿಕ ಚಟುವಟಿಕೆ ತುಂಬಿ ತುಳುಕುತ್ತಿದ್ದಾಗ ಬ್ಯಾಂಕ್ ದರದ ವ್ಯತ್ಯಾಸ ಯಾವ ಪರಿಣಾಮವನ್ನೂ ಬೀರ ಲಾರದು. ನಿರಾಸೆಯಿದ್ದಾಗ ಬಡ್ಡಿದರ ಇಳಿದರೂ ಸಹ ಯಾರೂ ಹಣವನ್ನು ಬೇಡುವುದಿಲ್ಲ. 1930 ರ ವಿಶ್ವ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಬಡ್ಡಿದರ ಎಷ್ಟೇ ಕಡಿಮೆಯಾದರೂ ಬ್ಯಾಂಕ್ ಸಾಲವನ್ನು ಯಾರೂ ಬೇಡಲಿಲ್ಲ. ''ಬಾಯಾರಿದ್ದರೆ ಮಾತ್ರ

ಕುದುರೆ ನೀರು ಕುಡಿಯುತ್ತದೆ; ಅದನ್ನು ನೀರಿಗೆ ಎಳೆದು ಕೊಂಡು ಹೋಗಬಹುದೇ ವಿನಾ ನೀರು ಕುಡಿಯುವಂತೆ ಮಾಡಲು ಸಾಧ್ಯವಿಲ್ಲ'' ಎಂದು ಕ್ರೌಧರ್ ಅಭಿಪ್ರಾಯ ಪಟ್ಟಿದ್ದಾರೆ. ಹಣದ ಪ್ರಮಾಣವನ್ನು ಕಡಿಮೆಗೊಳಿಸಿ ಹಣ ದುಬ್ಬರವನ್ನು ತಡೆಯಲು ಪ್ರಯತ್ನಿಸುವುದು ಇಳಿಜಾರಿನಲ್ಲಿ ಪೆಟ್ರೋಲ್ ಆರಿಸಿ ಕಾರನ್ನು ನಿಲ್ಲಿಸಲು ಪ್ರಯತ್ನಿಸಿದಂತೆ ಎನ್ನುವ ಕ್ರೌಧರ್ ಅವರ ಮಾತುಗಳು ಉಲ್ಲೇಖಾರ್ಹ. ಈ ಕ್ರಮಗಳ ಪರಿಣಾಮವು ಮುಖ್ಯವಾಗಿ ಸರ್ಕಾರದ ದಕ್ಷತೆಯನ್ನು ಅವಲಂಬಿಸಿದೆ. ಆದ್ದರಿಂದ ಹಣಕಾಸು ನೀತಿ ಪ್ರಮುಖ ಹಣದುಬ್ಬರ ವಿರೋಧೀ ಕ್ರಮವೆನಿಸಲಾರದು. ಇನ್ನಿತರೆ ಕ್ರಮಗಳ ಜೊತೆ ಗೂಡಿ ಹಣಕಾಸು ನೀತಿ ಹಣದುಬ್ಬರವನ್ನು ತಡೆಯುವಲ್ಲಿ ಫಲಕಾರಿಯಾಗಬಹುದು.

ರಾಜ್ಯಕೋಶ ನೀತಿ

ತೆರಿಗೆ, ವೆಚ್ಚ ಹಾಗೂ ಸಾರ್ವಜನಿಕ ಸಾಲಕ್ಕೆ ಸಂಬಂಧಿಸಿದ ಸರ್ಕಾರದ ಈ ನೀತಿಯು ಆರ್ಥಿಕ ಚಟುವಟಿಕೆಗಳಮೇಲೆ ತೀವ್ರವಾದ ಪರಿಣಾಮಗಳನ್ನು ಬೀರುತ್ತದೆ. ಜನರ ಕೊಳ್ಳುವ ಸಾಮರ್ಥ್ಯವನ್ನು ತಗ್ಗಿಸುವುದು ತೆರಿಗೆಯ ಉದ್ದೇಶಗಳಲ್ಲೊಂದು. ತೆರಿಗೆ ದರಗಳನ್ನು ಹೆಚ್ಚಿಸುವುದು, ಹೊಸ ತೆರಿಗೆಗಳನ್ನು ವಿಧಿಸುವುದು ಮತ್ತು ತೆರಿಗೆ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳುವುದು ಮುಂತಾದವು ಹಣದುಬ್ಬರ ವಿರೋಧೀ ಕ್ರಮಗಳು. ತೆರಿಗೆ ದರಗಳು ಹೆಚ್ಚಿದಾಗ ಅಥವಾ ಹೊಸ ತೆರಿಗೆಗಳನ್ನು ವಿಧಿಸಿದಾಗ ಜನರು ಕಡಿಮೆ ಕೊಳ್ಳಬೇಕಾಗುತ್ತದೆ, ಅಥವಾ ಹೆಚ್ಚು ಹಣವನ್ನು ತೆರಬೇಕಾಗುತ್ತದೆ. ಪರಿಣಾಮ

ವಾಗಿ ಬೇಡಿಕೆ ಕಡಿಮೆಯಾಗಿ ಬೆಲೆಗಳು ಇಳಿಮುಖವಾಗುತ್ತವೆ. ತೆರಿಗೆ ದರಗಳನ್ನು ಕಡಿಮೆಗೊಳಿಸಿ, ತೆರಿಗೆ ರಿಯಾಯಿತಿಗಳನ್ನು ಜಾರಿಗೆ ಮಾಡುವುದು ಹಣ ಸಂಚಯನದ ವಿರೋಧೀ ಕ್ರಮಗಳು. ತೆರಿಗೆ ರಿಯಾಯಿತಿಗಳನ್ನು ಜಾರಿಗೆ ತಂದು, ತೆರಿಗೆ ದರಗಳನ್ನು ಕಡಿಮೆಗೊಳಿಸುವುದರಿಂದ ಜನರ ಕೊಳ್ಳುವ ಶಕ್ತಿ ಹೆಚ್ಚಿ, ಪರಿಣಾಮವಾಗಿ ಬೇಡಿಕೆ ಹಾಗೂ ಬೆಲೆಗಳು ಏರತೊಡಗುತ್ತವೆ. ಕಡ್ಡಾಯ ಉಳಿತಾಯ ಮತ್ತು ಸರ್ಕಾರಿ ವೆಚ್ಚದಲ್ಲಿ ಮಿತವ್ಯಯ ಕೂಡ ಹಣದುಬ್ಬರ ವಿರೋಧೀ ಕ್ರಮಗಳು. ಹೆಚ್ಚು ವೆಚ್ಚ ಮತ್ತು ಸಾರ್ವಜನಿಕ ಕಾಮಗಾರಿಗಳು ಹಣ ಸಂಚಯನದ ವಿರೋಧೀ ಕ್ರಮಗಳು. ಆರ್ಥಿಕ ಹಿಂಜರಿತವಿದ್ದಾಗ ಸರ್ಕಾರೀ ವೆಚ್ಚವು ಹೆಚ್ಚಿದರೆ, ಈ ವೆಚ್ಚವು ಜನರಿಗೆ ಆದಾಯವಾಗಿ ಪರಿಣಮಿಸಿ, ಬೇಡಿಕೆ ಹಾಗೂ ಬೆಲೆಗಳು ಹೆಚ್ಚುತ್ತವೆ. ಸಾರ್ವಜನಿಕ ಸಾಲವನ್ನು ಎತ್ತುವುದು ಹಣದುಬ್ಬರ ವಿರೋಧಿಯಾದರೆ, ಸಾಲವನ್ನು ಹಿಂದಿರುಗಿಸುವುದು ಹಣ ಸಂಚಯನದ ವಿರೋಧೀ ಕ್ರಮ. ಸಾರ್ವಜನಿಕರಿಂದ ಸಾಲವನ್ನು ಪಡೆದರೆ ಅವರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತದೆ. ಪರಿಣಾಮವಾಗಿ ಬೇಡಿಕೆ ಕಡಿಮೆಯಾಗುತ್ತದೆ. ಇದೇ ರೀತಿ ಪಡೆದ ಸಾಲವನ್ನು ಮರುಪಾವತಿ ಮಾಡುವುದರಿಂದ ಜನರ ಆದಾಯವು ಹೆಚ್ಚಿ, ಬೇಡಿಕೆ ಮತ್ತು ಬೆಲೆಗಳು ಹೆಚ್ಚಾಗುತ್ತವೆ. 1930ರ ವಿಶ್ವ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ರಾಜ್ಯಕೋಶ ನೀತಿಯನ್ನು ಆರ್ಥಿಕ ಸ್ಥಿರತೆಯನ್ನು ಕಾಪಾಡುವ ಪ್ರಬಲ ಅಸ್ತ್ರವೆಂದು ಪರಿಗಣಿಸಲಾಯಿತು. ಆದರೆ ರಾಜ್ಯಕೋಶ ನೀತಿಯೊಂದೇ ಹೆಚ್ಚು ಪರಿಣಾಮಕಾರಿಯೆನಿಸಲಾರದು.

ಹಣಕಾಸು ಮತ್ತು ರಾಜ್ಯಕೋಶ ನೀತಿಗಳೆರಡೂ ಒಟ್ಟಿಗೇ ಸೇರಿದರೆ ಪರಿಣಾಮಗಳು ಪ್ರಬಲವಾಗುತ್ತವೆ.

ನೇರ ಹತೋಟಿ ಮತ್ತು ಇತರ ಕ್ರಮಗಳು

ಹಣದುಬ್ಬರ ಮತ್ತು ಹಣದ ಇಳಿತಾಯವನ್ನು ಹಿಂದು ಮುಂದು ಮಾಡಿ ಸಾಮಾನ್ಯ ಸ್ಥಿತಿಯನ್ನು ತರುವ ಕ್ರಮಗಳನ್ನು ನೇರ ಹತೋಟಿ ಕ್ರಮಗಳೆಂದು ಕರೆಯಬಹುದು. ಬೆಲೆ ಹತೋಟಿ, ವಸ್ತುಗಳ ಬೆಲೆಯನ್ನು ನಿಗದಿಪಡಿಸುವುದು, ಅಗತ್ಯ ವಸ್ತುಗಳ ಪಡಿತರ ಮುಂತಾದವು ಇಂತಹ ಕ್ರಮಗಳ ಪೈಕಿ ಕೆಲವು. ಅನುಭೋಗಿಯ ಪರಮಾಧಿಕಾರಕ್ಕೆ (Consumers Sovereignty) ಧಕ್ಕೆ ತರುವ ಈ ವಿಧಾನಗಳು ಕಟು ಟೀಕೆಗೊಳಗಾಗಿವೆ. "ಪಡಿತರ, ಸಂಪನ್ಮೂಲ ಮತ್ತು ಉದ್ಯೋಗವನ್ನು ವ್ಯರ್ಥಗೊಳಿಸುತ್ತದೆ"[12] ಎಂದು ಕೀನ್ಸ್ ಬರೆದಿದ್ದಾರೆ. ಕೂಲಿದರ ಮತು ಲಾಭವನ್ನು ಹತೋಟಿಗೊಳಪಡಿಸುವುದೂ ಸಹ ಅನಿವಾರ್ಯವಾಗಬಹುದು.

ಒಟ್ಟಾರೆ ಬೇಡಿಕೆ ಹೆಚ್ಚಿಸುವುದರ ಮೂಲಕ ಹಣದ ಸಂಚಯನವನ್ನು ತಡೆಗಟ್ಟಬಹುದು. ಸಮಾಜದ ಒಟ್ಟಾರೆ ಕೊಳ್ಳುವ ಶಕ್ತಿ ಹಾಗೂ ಅನುಭೋಗವನ್ನು, ಆದಾಯವನ್ನು ಶ್ರೀಮಂತರಿಂದ ಬಡವರಿಗೆ ವರ್ಗಾಯಿಸುವುದರ ಮೂಲಕ ಹೆಚ್ಚಿಸಬಹುದು. ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವ ಸೂಕ್ತ ವಾತಾವರಣವನ್ನು ನಿರ್ಮಿಸಬೇಕು. ತೆರಿಗೆ ರಿಯಾಯಿತಿ,

---

12. J. M. Keynes: How to pay for the war, p. 57

ಸಾರ್ವಜನಿಕ ವೆಚ್ಚ, ಖೋತಾ ಹಣಗಾರಿಕೆ ಮುಂತಾದವೂ ಕೂಡ ಸಹಾಯಕಾರಿ.

ಯಾವುದನ್ನೇ ಆಗಲಿ ಶೈಶವಾವಸ್ಥೆಯಲ್ಲೇ ಮೊಟಕುಗೊಳಿಸಬೇಕು. ಇಲ್ಲದಿದ್ದಲ್ಲಿ ಅದು ಬಲಿತ ಮೇಲೆ ತಡೆಯುವುದು ಅಸಾಧ್ಯವಾಗುತ್ತದೆ ಎಂಬುದು ಅನೇಕ ವಿದ್ವಾಂಸರ ಅಭಿಮತ. ಉತ್ಪಾದನೆಯನ್ನು ಹೆಚ್ಚಿಸಿ, ತನ್ಮೂಲಕ ಬೆಲೆಯೇರಿಕೆಯನ್ನು ತಡೆಯುವುದು ಸರ್ವ ಶ್ರೇಷ್ಠವಾದ ಮಾರ್ಗವಾಗಿದೆ. ಸರ್ಕಾರ ಸದಾ ಜಾಗರೂಕವಾಗಿದ್ದೇ ಆದರೆ ಯಾವುದೇ ಅನಿಷ್ಟ ಪ್ರವೃತ್ತಿ ಮತ್ತು ಆತಂಕಕಾರಿ ಬೆಳವಣಿಗೆಯನ್ನು ತಡೆಯುವುದು ಮತ್ತು ನಿವಾರಿಸುವುದು ಕಷ್ಟವೇನಲ್ಲ.

ಗ್ರಂಥಋಣ

1. Kenneth Kurihara — Monetary Theory and Public Policy
2. Crowther — An Outline of Money
3. Kemmerer — A. B. C. of Inflation
4. Milton Friedman — Inflation – Causes and Consequences
5. Paul Einzig — Inflation
6. Bent Hansen — A Study in the Theory of Inflation
7. J. M. Keynes — General Theory
8. W. A. Lewis — The Theory of Economic Growth
9. P. P. Kent — Money and Banking
10. C. N. Vakil — Financial Burden of War on India
11. ಹಣ ಒಂದು ವಿವೇಚನೆ — ಎಚ್. ಎಸ್. ರಾಜರತ್ನಂ ಎಚ್. ಎಸ್. ಶ್ರೀಧರಮೂರ್ತಿ

[illegible]

1. Kenneth Kurihara — Monetary Theory and Public Policy
2. Crowther — An Outline of Money
3. [illegible] — A. B. C. of Inflation
4. Milton Friedman — Inflation — Causes and Consequences
5. Paul Einzig — Inflation
6. Bent Hansen — A Study in the Theory of Inflation
7. J. M. Keynes — General Theory
8. W. A. Lewis — The Theory of Economic Growth
9. R. P. Kent — Money and Banking
10. [illegible] — Economic Development [illegible]
11. [illegible] — [illegible]

ಪ್ರಚಾರೋಪನ್ಯಾಸ ಮಾಲೆ

1.	ನಗೆಯ ನೆಲೆ	ಎಸ್. ಕೆ. ರಾಮಚಂದ್ರರಾವ್
2.	ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
3.	ಭಯ-ಸರಳ ವಿಶ್ಲೇಷಣೆ	ಎಂ. ಶಿವರಾಂ
4.	ಶ್ರೀ ಕವಿ ಲಕ್ಷ್ಮೀಶ	ಜಿ. ಎಸ್. ಸಿದ್ಧಲಿಂಗಯ್ಯ
5.	ಶಾಂತಿನಾಥ ಕವಿ	ಕಮಲಾ ಹಂಪನಾ
6.	ಉತ್ತಂಗಿ ಚನ್ನಪ್ಪ	ಸ. ಸ. ಮಾಳವಾಡ
7.	ಬಯಲಾಟಗಳು	ಚಂದ್ರಶೇಖರ ಕಂಬಾರ
8.	ನಾಟಕದಲ್ಲಿ ನವ್ಯತೆ	ಪಿ. ಲಂಕೇಶ್
9.	ದ್ರಾವಿಡ ಸಂಖ್ಯಾವಾಚಕಗಳು	ಹಂಪ. ನಾಗರಾಜಯ್ಯ
10.	ಉಪಭಾಷೆ	ಕೃಷ್ಣ ಪರಮೇಶ್ವರ ಭಟ್ಟ
11.	ಅರವಿಂದರ ವಿಚಾರಧಾರೆ	ಸಿ. ಕೆ. ವೆಂಕಟರಾಮಯ್ಯ
12.	ಪೂರ್ಣಯೋಗಿ ಶ್ರೀ ಅರವಿಂದರು	ಕೋ. ಚನ್ನಬಸಪ್ಪ
13.	ಪ್ರಾಚೀನ ಸಂಸ್ಕೃತಿ	ಎಸ್. ಕೆ. ರಾಮಚಂದ್ರರಾವ್
14.	ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆ	ಎನ್. ಜಿ. ಚಂದ್ರಶೇಖರಯ್ಯ
15.	ಸಣ್ಣ ಕೈಗಾರಿಕೆಗಳು	ಆರ್. ಎಸ್. ಆರಾಧ್ಯ
16.	ವಿವಾಹ ಪದ್ಧತಿಗಳು	ಎಸ್. ಕೆ. ರಾಮಚಂದ್ರರಾವ್
17.	ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
18.	ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿಶೆಟ್ಟಿ
19.	ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
20.	ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
21.	ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
22.	ಕುರುಡು	ಎಸ್. ಟಿ. ಪುಟ್ಟಣ್ಣ
23.	ಕಣ್ಣಿನ ರೋಗಗಳು	ಎಸ್. ಟಿ. ಪುಟ್ಟಣ್ಣ
24.	ಕ್ಷಯ	ಎಂ. ಬಸವರಾಜೆ ಅರಸು
25.	ಮೂತ್ರಪಿಂಡದ ಕೆಲವು ರೋಗಗಳು	ಎಂ. ಬಸವರಾಜೆ ಅರಸು
26.	ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
27.	ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
28.	ಅಂತರ್ಜಲ	ಸಿ. ನಾಗಣ್ಣ
29.	ಪಂಪ	ತ. ಸು. ಶಾಮರಾಯ
30.	ದೇಹರಚನೆ ಹಾಗೂ ಮೂಳೆಗಳು	ಎಸ್. ಬಿ. ವಸಂತ ಕುಮಾರ್
31.	ಶ್ರೀನಿವಾಸ ರಾಮಾನುಜನ್	ಜಿ. ಟಿ. ನಾರಾಯಣರಾವ್
32.	ಮಹಾಕವಿ ಕುಮಾರನಾಶಾನ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕ
33.	ತುಳ್ಳಲ್‌ಕವಿ ಕುಂಜನ್ ನಂಬಿಯಾರ್	ಬಿ. ಕೆ. ತಿಮ್ಮಪ್ಪ, ಟಿ. ವೆಂಕ
34.	ಪರಾಮಾನಸಶಾಸ್ತ್ರ	ಎಸ್. ಕೆ. ರಾಮಚಂದ್ರರಾವ್